ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

20 ಫೆಬ್ರವರಿ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 336 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಹಾಲಿ ಟಿ-20 ವಿಶ್ವಕಪ್‌ನ ಅಚ್ಚರಿಯ ಪ್ಯಾಕೇಜ್ ಎನಿಸಿರುವ ಜಿಂಬಾಬ್ವೆ ತಂಡ ಆರು ವಿಕೆಟ್‌ಗಳಿಂದ ಆತಿಥೇಯ ಶ್ರೀಲಂಕಾ ತಂಡಕ್ಕೂ ಆಘಾತ ನೀಡಿ, ಅಜೇಯ ಸಾಧನೆಯೊಡನೆ ಬಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.



ಬಹು ನಿರೀಕ್ಷಿತ ಲವ್ ಮಾಕ್ಟೇಲ್ -3 ಚಿತ್ರದ ಒಬ್ಬಂಡಿಯಾದೆ ನಾ... » 2

ಪೋಷಕರ ಅತಿಯಾದ ನಿರೀಕ್ಷೆಯಿಂದ ಮಕ್ಕಳಲ್ಲಿ ಖಿನ್ನತೆ » 3



ಜಾಗತಿಕ ಆಹಾರ ಭದ್ರತೆ : ವಿಶ್ವಸಂಸ್ಥೆ ಜೊತೆ ಭಾರತ ಒಡಂಬಡಿಕೆ » 4

ಅಧಿಕಾರ ಮರಳಿ ಪಡೆಯುವ ಸಂಕಲ್ಪ

ಬಿಜೆಪಿ ಕಾರ್ಯಕಾರಿಣಿ ಸಭೆ: 2028ರ ಚುನಾವಣೆಗೆ ನಾಯಕರಿಂದ ಗಂಭೀರ ಚರ್ಚೆ

• ಪ್ರಜೋದಯ ವರದಿ

ಬೆಂಗಳೂರು : ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಬಿಜೆಪಿ ಸಿದ್ಧತೆ ಆರಂಭಿಸಿದೆ. ಈ ನಿಟ್ಟಿನಲ್ಲಿ ಗುರುವಾರ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಬಿಜೆಪಿ ರಾಜ್ಯ ನಾಯಕರು ಮತ್ತು ರಾಷ್ಟ್ರೀಯ ನಾಯಕರು ಮುಂದಿನ ಚುನಾವಣೆ, ಸಂಘಟನೆ ಹಾಗು ಆತ್ಮಮಂಥನದ ಕುರಿತಾಗಿ ಗಂಭೀರ ಚರ್ಚೆ ನಡೆಸಿದರು.

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ವಿಚಾರಧಾರೆಯ ಮನನ ಮಾಡುವ ಸಭೆ ಇದು. ಸಂಘಟನೆ, ಭ್ರಷ್ಟ ಸರ್ಕಾರವನ್ನು ಅಧಿಕಾರದಿಂದ ತೊಲಗಿಸಿ ಅಧಿಕಾರ ಮರಳಿ ಪಡೆಯುವ ಸಂಕಲ್ಪದ ಸಭೆ ಇದಾಗಿದೆ. ವಿಕಸಿತ ಭಾರತವಾಗಿ ದೇಶವನ್ನು ಪರಿವರ್ತಿಸಲು ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕಿದೆ. 2028ರಲ್ಲಿ ಕರ್ನಾಟಕದಲ್ಲಿ ಪ್ರಚಂಡ ಬಹುಮತದೊಂದಿಗೆ ಬಿಜೆಪಿ ಅಧಿಕಾರ ಪಡೆಯಲಿದೆ ಎಂದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಹಾಗು ಜಿಬಿಎ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಸಂಕಲ್ಪ ನಮ್ಮದಾಗಬೇಕು. ಪಕ್ಷವನ್ನು ತಳ ಮಟ್ಟದಲ್ಲಿ ಬಲಪಡಿಸಬೇಕು. ಇದು ಪರೀಕ್ಷೆಯ ಕಾಲ, ಕಾರ್ಯಕರ್ತರು ಜನರ ಮನೆ ಮನೆಗೆ ತೆರಳಿ ಕಾಂಗ್ರೆಸ್ಸಿನ ವೈಫಲ್ಯ ಗಳನ್ನು ತಿಳಿಸಬೇಕು. ಜನರು ಗ್ಯಾರಂಟಿ ಎಲ್ಲಿದೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಸಾಲದ ಪ್ರಮಾಣ ತೀವ್ರವಾಗಿ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಜನರು ಅದಕ್ಕೆ ಸೂಕ್ತ ಉತ್ತರ ನೀಡಲಿದ್ದಾರೆಂದರು.

ಕಾಂಗ್ರೆಸ್ ಸರ್ಕಾರ ಕರ್ನಾಟಕ ವನ್ನು ಭ್ರಷ್ಟ ರಾಜ್ಯವನ್ನಾಗಿಸಿದೆ. ಆರ್ಥಿಕವಾಗಿ ದಿವಾಳಿ ಮಾಡಿದೆ. ಅಸಮರ್ಥ ಆಡಳಿತದ ನಾಡಾಗಿದೆ. ಮುಖ್ಯಮಂತ್ರಿ ಪದವಿಗಾಗಿ ಆರಂಭದಲ್ಲೇ ಒಳಜಗಳ ಇತ್ತು. ಅದು ಈಗಲೂ ಮುಂದುವರೆದಿದೆ. ಇದು ಜನಾದೇಶಕ್ಕೆ ಮಾಡುತ್ತಿರುವ ಅಪಮಾನ ಎಂದು ದೂರಿದರು.

2028ಕ್ಕೆ ಬಿಜೆಪಿ ಗತ ವೈಭವ

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಾತನಾಡಿ, ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯದೆಲ್ಲೆಡೆ ಜನಾಕ್ರೋಶ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ನಮ್ಮಲ್ಲಿರುವ

» ನಾಲ್ಕನೇ ಪುಟದಲ್ಲಿ

ವಿಜಯೇಂದ್ರ ತಂಡಕ್ಕೆ ಬಹುಮತ

ಬಿ.ವೈ.ವಿಜಯೇಂದ್ರ ನೇತೃತ್ವದ ತಂಡ ಮುಂದಿನ ವಿಧಾನಸಭಾ ಚುನಾವಣೆಯನ್ನು ಎದುರಿಸಿ ಬಹು ಮತ ಸಾಧಿಸಲಿದೆ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ ವಾಲ್ ವಿಶ್ವಾಸ ವ್ಯಕ್ತಪಡಿಸಿದರು. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಆರ್.ಅಶೋಕ್ ಮತ್ತು ಛಲವಾದಿ ನಾರಾಯಣ ಸ್ವಾಮಿ ಅವರು ಭ್ರಷ್ಟ ಸರ್ಕಾರವನ್ನು ಕಟ್ಟಿ ಹಾಕುವಲ್ಲಿ ಯಶಸ್ವಿಯಾಗಿ ದ್ದಾರೆ. ಸದನದ ಒಳಗೆ ಮತ್ತು ಹೊರಗೆ ಈ ಮೂವರ ತಂಡ ಸರ್ಕಾರ ವಿರುದ್ಧ ಹೋರಾಟ ನಡೆಸುತ್ತಿದೆ. ಮುಂಬರುವ ವಿಧಾನಸಭಾ ಉಪ ಚುನಾವಣೆಗಳು, ವಿಧಾನಪರಿಷತ್, ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಗೆಲ್ಲಬೇಕು. ಇದಕ್ಕೆ ಸಂಘಟಿತ ಪ್ರಯತ್ನ ಇರಬೇಕೆಂದರು.

ಕರವೇ ಪ್ರತಿಭಟನೆಗೆ ಮಣಿದು ತಾ.ಪಂ.ಮಳಿಗೆ ತೆರವು

• ಪ್ರಜೋದಯ ವರದಿ

ಬೇಲೂರು: ನ್ಯಾಯಾಲಯ ಆದೇಶ ವಿದ್ದರೂ ತಾಲ್ಲೂಕು ಪಂಚಾಯಿತಿಗೆ ಸೇರಿದ ವಾಣಿಜ್ಯ ಮಳಿಗೆಗಳ ವಾಪಾಸ್ ಪಡೆಯುವಲ್ಲಿ ತಾಲ್ಲೂಕು ಪಂಚಾಯಿತಿ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ತಾಲ್ಲೂಕು ಪಂಚಾಯಿತಿ ಕಚೇರಿಗೆ ಬೀಗ ಹಾಕಿದ ಪ್ರತಿಭಟನಾಕಾರರು ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿ ಕಾರಿ ಪ್ರತಿಭಟನೆಯ ಗಂಭೀರತೆ ಅರಿತು ಕೂಡಲೇ ಸಾರ್ವಜನಿಕರ ಸಮ್ಮುಖದಲ್ಲೇ ಮಳಿಗೆಗಳಿಗೆ ಬೀಗ ಹಾಕಿ ಮುದ್ರೆ ಒತ್ತಿದರು.

ಕರವೇ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್ ಅವರು ಮಾತನಾಡಿ, ತಾಲ್ಲೂಕು ಪಂಚಾಯಿತಿ ಕಚೇರಿಗೆ ಸೇರಿದ ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟವಾಗಿದೆ. ಇಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳ ಒತ್ತಾಯಕ್ಕೆ ಮಣಿದು ಮಳಿಗೆ ಬಾಡಿಗೆದಾರರೊಂದಿಗೆ ಶಾಮೀಲಾಗಿ ಮಳಿಗೆಗಳನ್ನು ತೆರವುಗೊಳಿಸದೆ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಸರ್ಕಾರಿ ಆಸ್ತಿ ರಕ್ಷಿಸಬೇಕಾದ ಅಧಿಕಾರಿಗಳೇ ಇಲ್ಲಿ ವ್ಯವಸ್ಥೆ ಹಾಳು ಮಾಡುತ್ತಿದ್ದಾರೆ. ಮತ್ತು ಮಳಿಗೆಯಲ್ಲಿರುವ ಬಾಡಿಗೆದಾರರು ನ್ಯಾಯಾಲಯಕ್ಕೆ ಹೋಗಿದ್ದರು. ಅಲ್ಲಿಯೂ ಇವರ ಅರ್ಜಿ ವಜಾಗೊಂಡಿತ್ತು. ನಂತರ ಹೈಕೋರ್ಟ್ ಮೊರೆ ಹೋದರೂ ಅಲ್ಲಿಯೂ ತಾಪಂ ಅಧಿಕಾರಿಗಳು ವಾಣಿಜ್ಯ ಮಳಿಗೆಗಳನ್ನು ಸ್ವಾಧೀನ ಪಡಿಸಿಕೊಳ್ಳಲು ನ್ಯಾಯಾಲಯ ಆದೇಶಿಸಿದ್ದರೂ ಅಧಿಕಾರಿಗಳು ಮಳಿಗೆ ಖಾಲಿ ಮಾಡಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಬ್ದುಲ್ ಅವರು ಮಾತನಾಡಿ, ಮಳಿಗೆ ವಿಚಾರದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗ್ಗೆ ಗಮನಕ್ಕೆ ತಂದರೂ ಕ್ರಮ ವಹಿಸಿಲ್ಲ. ನ್ಯಾಯಾಲಯ ಸಹ ತಾಲ್ಲೂಕು ಪಂಚಾಯಿತಿ ಅಧಿಕಾರಿಗೆ 45 ದಿನ ಕಾಲಾವಕಾಶ ನೀಡಿ ತೆರವುಗೊಳಿಸಿ ಎಂದಿದ್ದರೂ ಸಹ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳು ಮಳಿಗೆಯವರೊಂದಿಗೆ ಶಾಮೀಲಾಗಿ ಬಾಡಿಗೆದಾರರನ್ನು ತೆರವುಗೊಳಿಸಿಲ್ಲ. ಆದ್ದರಿಂದ ಎಲ್ಲಾ ಮಳಿಗೆಯವರನ್ನು ತೆರವುಗೊಳಿಸಿ ಮರು ಹರಾಜು ಮಾಡಬೇಕು ಇಲ್ಲದಿದ್ದಲ್ಲಿ ಪ್ರತಿಭಟನೆ ತೀವ್ರ ಗೊಳಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು. ಕರವೇ ಗೌರವಾಧ್ಯಕ್ಷ ತಾರಾನಾಥ್, ಕೋಗಿಲಮನೆ ಕುಮಾರ್, ಉಪಾಧ್ಯಕ್ಷ ಚಂದ್ರೇಗೌಡ, ಪ್ರಸನ್ನ ಹೊಸಳ್ಳಿ, ಅನೀಫ್, ನಗರಾಧ್ಯಕ್ಷ ಪ್ರಸನ್ನ, ಮುಖಂಡರಾದ ಆನಂದ್, ಚಂದ್ರು, ಯೋಗೀಶ್, ಶ್ರೀಧರ್, ಅನೀಫ್, ಗಂಗರಾಜು ಹಾಗೂ ತಾಪಂ ಸಿಬ್ಬಂದಿ ನಂದಕುಮಾರ್, ಮಂಜುನಾಥ್ ಇತರರಿದ್ದರು.

ಫೆ.22ಕ್ಕೆ ಮೂರು ಪುಸ್ತಕಗಳ ಬಿಡುಗಡೆ

• ಪ್ರಜೋದಯ ವರದಿ

ಹಾಸನ: ನಗರದ ಎಂ.ಜಿ.ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಭಾನುವಾರ ಮಧ್ಯಾಹ್ನ 1.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಪತ್ರಕರ್ತ ಉದಯ ರವಿ ಅವರ ಹಾಸನ ಜಿಲ್ಲಾ ವೈಶಿಷ್ಟ್ಯ ಕೃತಿಯನ್ನು ಕನ್ನಡ ಪ್ರಾಧ್ಯಾಪಕ ಡಾ.ಜಯಶಂಕರ ಹಲಗೂರು, ಕೃಷ್ಣ ಹಾನುಬಾಳು ರಚಿತ ಏಳು ಬೀಳಿನ ಹಾದಿಯಲ್ಲಿ ಪುಸ್ತಕವನ್ನು ಸಾಹಿತಿ ಡಾ.ರಾಮಲಿಂಗೇಶ್ವರ ಹಾಗು ಜಯಂತಿ ಚಂದ್ರಶೇಖರ್ ಅವರ ನಿರ್ಲಿಪ್ತ ಕಾದಂಬರಿಯನ್ನು ಪತ್ರಕರ್ತ ಕೆ.ಆರ್. ನೀಲಕಂಠ ಬಿಡುಗಡೆ ಮಾಡಲಿದ್ದಾರೆ.

ಹಿರಿಯ ಸಾಹಿತಿ ಡಿ.ಕಾಳೇಗೌಡ ನಾಗಾವರ ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹಾಗು ಪತ್ರಕರ್ತ ಉದಯರವಿ ಪ್ರಸ್ತಾವಿಕ ಭಾಷಣ ಮಾಡಲಿದ್ದಾರೆ. ಜಾನಪದ ವಿದ್ವಾಂಶ ಚಂದ್ರು ಕಾಳೇನಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಉಪಸ್ಥಿತಿ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿಮ್ಸ್ ಪ್ರಾಂಶುಪಾಲ ಡಾ॥ ಬಿ.ಸಿ. ರವಿಕುಮಾರ್, ನಿರಂತರ ಪ್ರಕಾಶನದ ಪ್ರವೀಣ್ ಜಗಾಟ ಪಾಲ್ಗೊಳ್ಳಲಿದ್ದಾರೆ.

ನಗರದ 80 ಅಡಿ ರಸ್ತೆಯಲ್ಲಿ ಬೈಕ್ ವ್ಹೀಲಿಂಗ್ ಹುಚ್ಚಾಟ

• ಪ್ರಜೋದಯ ವರದಿ



ಹಾಸನ: ಸಾಮಾಜಿಕ ಜಾಲತಾಣಗಳಲ್ಲಿ ಮೆಚ್ಚುಗೆಗಾಗಿ ಯುವಕರ ಗುಂಪೊಂದು ಸಾರ್ವಜನಿಕ ರಸ್ತೆಯಲ್ಲಿ ಬೈಕ್ ವ್ಹೀಲಿಂಗ್ ಹುಚ್ಚಾಟ ನಡೆಸಿರುವ ಘಟನೆ ನಗರದ 80 ಅಡಿ ರಸ್ತೆಯಲ್ಲಿ ಗುರುವಾರ ನಡೆದಿದೆ.

ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಏಳೆಂಟು ಯುವಕರು, ರಸ್ತೆಯ ಮಧ್ಯದಲ್ಲೇ ಬೈಕ್ ಎತ್ತಿ ಹುಚ್ಚು ಸಾಹಸ ಮಾಡುತ್ತಾ ಅದನ್ನು ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಲು ಯುವಕರ ಗುಂಪು ಮುಂದಾಗಿದ್ದು ಆತಂಕಕ್ಕೆ ಎಡೆಮಾಡಿಕೊಟ್ಟಿದೆ.

ಈ ದೃಶ್ಯಗಳನ್ನು ಇನ್‌ಸ್ಟಾಗ್ರಾಂ ಹಾಗು ಫೇಸ್‌ಬುಕ್‌ಗಳಲ್ಲಿ ಅಪ್ಲೋಡ್ ಮಾಡಿ ಲೈಕ್‌ಗಾಗಿ ಅವರು ಪ್ರಯತ್ನಿಸಿದ್ದಾರೆ ಎನ್ನಲಾಗಿದೆ. ಇದರಿಂದ ಕೆಲಸಕ್ಕೆ ತೆರಳುತ್ತಿದ್ದ ಸಾರ್ವಜನಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗು ಬೆಳಿಗ್ಗೆ ವಾಕಿಂಗ್ ಮಾಡುವ ನಾಗರಿಕರು ಭಯಭೀತರಾಗಿದ್ದಾರೆ. ವ್ಹೀಲಿಂಗ್ ಮಾಡುವ ವೇಳೆ ಬೈಕ್ ನಿಯಂತ್ರಣ ತಪ್ಪಿದರೆ ಸಂಭವಿಸಬಹುದಾದ ಅಪಘಾತದಿಂದ ಅಮಾಯಕರ ಜೀವಕ್ಕೂ ಅಪಾಯ ಉಂಟಾಗಬಹುದೆಂಬ ಆತಂಕ ವ್ಯಕ್ತವಾಗಿದೆ. 80 ಅಡಿ ರಸ್ತೆ ಮಾತ್ರವಲ್ಲದೆ ಎಂ.ಜಿ. ರಸ್ತೆ, ರಿಂಗ್ ರಸ್ತೆ ಹಾಗು ನಗರದ ಹೊರವಲಯ ಪ್ರದೇಶಗಳಲ್ಲಿಯೂ ವ್ಹೀಲಿಂಗ್ ಪುಂಡರ ಹಾವಳಿ ಹೆಚ್ಚಾಗಿದೆ. ಕೆಲ ಯುವಕರು ಗುಂಪುಗೂಡಿ ರಸ್ತೆ ಖಾಲಿ ಮಾಡಿಸಿ ಬೇರೆಯವರಿಗೆ ಕಿರಿಕಿರಿ ಮಾಡುತ್ತಿರುವುದು ಸಾಮಾನ್ಯ ವಾಗಿದೆ. ಅದರಿಂದ ಕಾನೂನು ಸುವ್ಯವಸ್ಥೆಗೆ ಸವಾಲಾಗಿದೆ. ಸಾರ್ವ ಜನಿಕರು ತಕ್ಷಣ 112 ಸಹಾಯವಾಣಿಗೆ ಕರೆ ಮಾಡಿದ ಹಿನ್ನಲೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿದರು. ಪೊಲೀಸರು ಬರುವುದನ್ನು ಗಮನಿಸಿದ ಯುವಕರು ಅಲ್ಲಿಂದ ಪರಾರಿಯಾಗಿದ್ದಾರೆ. ಈ ವೇಳೆ ಗುಂಪು ಗುಂಪಾಗಿ ವಿಡಿಯೋ ವೀಕ್ಷಿಸುತ್ತಿದ್ದವರನ್ನು ಪೊಲೀಸರು ಚದುರಿಸಿ ಪರಿಸ್ಥಿತಿ ನಿಯಂತ್ರಿಸಿದರು.

ಅನುದಾನ ಕೊರತೆಯಿಂದ ಸೊರಗಿದೆ ಹಾಸನ ವಿವಿ

3 ವರ್ಷದಲ್ಲಿ ದೊರೆತಿರುವುದು 2 ಕೋ.ರೂ. ಅಷ್ಟೇ | ಶೈಕ್ಷಣಿಕ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ

• ಪ್ರಜೋದಯ ವರದಿ

ಹಾಸನ : ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿ ಸೃಷ್ಟಿಸಬೇಕಿದ್ದ ಹಾಸನ ವಿಶ್ವ ವಿದ್ಯಾಲಯ ಅನುದಾನದ ಕೊರತೆಯಿಂದ ಸೊರಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ವಿಶ್ವವಿದ್ಯಾಲಯಕ್ಕೆ ಬಂದಿರುವುದು ಕೇವಲ 2 ಕೋ.ರೂ. ಅನುದಾನ ಮಾತ್ರ ಎಂಬುದು ದುರಾದೃಷ್ಟಕರ ಸಂಗತಿ.

ರಾಜ್ಯ ಸರ್ಕಾರ ಹಾಸನ ವಿವಿಗೆ 2023-24ನೇ ಸಾಲಿನಲ್ಲಿ 1 ಕೋ.ರೂ., 2024-25ನೇ ಸಾಲಿನಲ್ಲಿ 57.25 ಲ.ರೂ., 2025-26ನೇ ಸಾಲಿನಲ್ಲಿ 48.40 ಲ.ರೂ. ಅನುದಾನ ಬಿಡುಗಡೆ ಮಾಡಿದೆ. ಅಗತ್ಯಕ್ಕೆ ಅನುಗುಣವಾಗಿ ಹಣಕಾಸು ಸಿಗದಿರುವುದರಿಂದ ವಿಶ್ವವಿದ್ಯಾಲಯಲ್ಲಿ ಮೂಲಸೌಕರ್ಯ ಕೊರತೆ ದೊಡ್ಡದಾಗಿದೆ. ಯಾವುದೇ ವಿಭಿನ್ನ ಶೈಕ್ಷಣಿಕ ಚಟುವಟಿಕೆಗಳು ನಡೆಯದೇ ವಿದ್ಯಾರ್ಥಿಗಳ ಕಲಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಬೋಧಕ-ಬೋಧಕೇತರ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ನಡೆಯದಿರುವುದು ಮತ್ತೊಂದು ರೀತಿಯ ಸಮಸ್ಯೆಗೆ ಕಾರಣವಾಗಿದೆ.

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ತರಾತುರಿ, ಯಾವುದೇ ಪೂರ್ವಸಿದ್ಧತೆ ಇಲ್ಲದೆ ರಾಜ್ಯದಲ್ಲಿ ಹಾಸನ ಸೇರಿ ಏಳು ಹೊಸ ವಿಶ್ವ ವಿದ್ಯಾಲಯಗಳನ್ನು ಸ್ಥಾಪನೆ ಮಾಡಲಾಯಿತು. ಆದರೆ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ, ಬಿಜೆಪಿ ಸರ್ಕಾರ ಸ್ಥಾಪನೆ ಮಾಡಿದ ಹೊಸ ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗುವಂತೆ ಸೂಕ್ತ ಅನುದಾನ, ಅಗತ್ಯಕ್ಕೆ ಅನುಗುಣವಾಗಿ ಉಪನ್ಯಾಸಕರು, ಸಿಬ್ಬಂದಿ ನೇಮಕ ಮಾಡದಿರುವುದರಿಂದ ಹೊಸದಾಗಿ ಸ್ಥಾಪನೆಗೊಂಡ ವಿಶ್ವವಿದ್ಯಾಲಯಗಳು ಅತಂತ್ರ ಸ್ಥಿತಿಗೆ ತಲುಪಿವೆ.

ಹೊಸ ವಿಶ್ವ ವಿದ್ಯಾಲಯಗಳು ಸ್ಥಾಪನೆಯಾಗಿ ಮೂರು ವರ್ಷವಾಗುತ್ತಿದೆ. ಮೊದಲ ವರ್ಷದಲ್ಲಿ ಎಲ್ಲಾ ವಿವಿಗಳು ತಲಾ ಒಂದು ಕೋ.ರೂ. ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿದೆ. ಬಳಿಕ ಅನುದಾನದಲ್ಲಿ ಕತ್ತರಿ ಬಿದ್ದಿದ್ದು, ಹಾಸನ ವಿಶ್ವವಿದ್ಯಾಲಯಕ್ಕೆ ಮೊದಲ ವರ್ಷದಲ್ಲಿ 1 ಕೋ.ರೂ. ಅನುದಾನ ಸಿಕ್ಕರೆ, 3ನೇ ವರ್ಷಕ್ಕೆ 48 ಲಕ್ಷಕ್ಕೆ ಅಂದರೆ ಅರ್ಧದಷ್ಟು ಅನುದಾನ ಕಡಿತವಾಗಿದೆ. ಇದರಿಂದ ವಿಶ್ವವಿದ್ಯಾಲಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಕೊಂಡಿದೆ. ಹೊಸ ವಿಶ್ವವಿದ್ಯಾಲಯಗಳಿಗೆ ಕೊಟ್ಟಿರುವ ಅಲ್ಪ ಅನುದಾನದಲ್ಲಿ ಏನು ಮಾಡಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಶೈಕ್ಷಣಿಕ, ಸಿವಿಲ್, ಮೂಲ ಸೌಕರ್ಯ ಅಭಿವೃದ್ಧಿ ಮಾಡಲು ಆಗುತ್ತಿಲ್ಲ. ಬರೀ ನಿರ್ವಹಣೆ, ಸಂಬಳಕ್ಕೆ ಮಾತ್ರ ಅನುದಾನ ಖರ್ಚಾಗಿ ಹೋಗುತ್ತಿದೆ.

ಕಾಂಗ್ರೆಸ್ ಸರ್ಕಾರಕ್ಕೆ ಬೇಡವಾದ ವಿವಿ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸ್ಥಾಪನೆಯಾಗಿರುವ ಹೊಸ ವಿಶ್ವವಿದ್ಯಾಲಯಗಳು ಈಗಿನ ಕಾಂಗ್ರೆಸ್ ಸರ್ಕಾರಕ್ಕೆ ಬೇಡವಾಗಿವೆ. ಹೊಸ ವಿದ್ಯಾಲಯಗಳನ್ನು ಮುಚ್ಚಿ ಹಿಂದಿನಂತೆ ಮುಂದುವರೆಸಲು ಜನರು ಬಿಡುತ್ತಿಲ್ಲ. ಅನುದಾನ ನೀಡಿ ಅಭಿವೃದ್ಧಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಹೊಸ ವಿವಿಗಳು, ವಿದ್ಯಾರ್ಥಿಗಳು ಅತಂತ್ರ ಸ್ಥಿತಿಗೆ ಸಿಲುಕುವಂತಾಗಿದೆ. ಸರ್ಕಾರದ ಪಾಲಿಗೆ ಬಿಸಿ ತುಪ್ಪವಾಗಿರುವ ಈ ವಿವಿಗಳನ್ನು ಯಥಾಸ್ಥಿತಿಯಲ್ಲೇ ಮುಂದುವರಿಸಿಕೊಂಡು ಹೋಗುವ ಅನಿವಾರ್ಯತೆ ಸೃಷ್ಟಿಯಾಗಿರುವುದರಿಂದ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಒಂದಿಷ್ಟು ಅನುದಾನ ನೀಡಿ, ಕೈ ತೊಳೆದುಕೊಳ್ಳುತ್ತಿದೆ. ಈ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳದಿರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತಿದೆ.

ನೇಮಕಾತಿ ನಡೆದಿಲ್ಲ

ಹೊಸದಾಗಿ ನೇಮಕಾತಿ ಆಗಿಲ್ಲ. ಹೀಗಾಗಿ, ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ ಕೊರತೆಯಿಂದ ತತ್ತರಿಸುವಂತಾಗಿದೆ. ತಾತ್ಕಾಲಿಕ ಸಿಬ್ಬಂದಿಯಿಂದಲೇ ವಿವಿ ನಡೆಯುತ್ತಿದೆ. 2023ರಲ್ಲಿ ಮಾತ್ರ ವಿಶ್ವವಿದ್ಯಾಲಯಗಳಿಂದ ಬೇರ್ಪಟ್ಟು ನೂತನವಾಗಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳಲ್ಲಿನ ಹುದ್ದೆಗಳ ವಿಲೀನ ಪ್ರಕ್ರಿಯೆ ಇನ್ನೂ ಅಂತಿಮಗೊಂಡಿಲ್ಲ. ನೂತನ ಪಿಂಚಣಿ ವ್ಯವಸ್ಥೆ ಸಹ ಪೂರ್ಣಗೊಂಡಿಲ್ಲ. ಜೊತೆಗೆ, ವರ್ಗಾವಣೆಗೊಂಡ ಹುದ್ದೆಗಳಿಗೆ ಮೀಸಲಾತಿ ಬಿಂದುಗಳು, 371ಜೆ ಮೀಸಲಾತಿ ಗುರುತಿಸುವ ಇತ್ಯಾದಿ ಕಾರಣಗಳಿಂದ ಈ ವಿವಿಗಳು ಯಾವುದೇ ನೇಮಕಾತಿ ಕುರಿತು ಅಧಿಸೂಚನೆ ಹೊರಡಿಸಿಲ್ಲ. ಹೀಗಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೂಡ ಸಮಸ್ಯೆ ಎದುರಿಸುತ್ತಿದ್ದಾರೆ.

ದೈನಂದಿನ ಖರ್ಚು ವೆಚ್ಚಕ್ಕೂ ಕಷ್ಟ

ಹೊಸ ವಿವಿಗಳನ್ನು ವಿನೂತನ ಮಾದರಿಯಲ್ಲಿ ಸ್ಥಾಪಿಸಿ, ಸಾಂಪ್ರದಾಯಿಕ ವಿವಿಗಳಿಂದ ಭಿನ್ನವಾಗಿ ಮತ್ತು ತಂತ್ರಜ್ಞಾನದ ಗರಿಷ್ಠ ಬಳಕೆ ಮಾಡಿಕೊಳ್ಳಲಾಗುವುದೆಂಬ ಆರಂಭಿಕ ಹಂತದಲ್ಲಿ ಸರ್ಕಾರದ ಹೇಳಿಕೆ ಇದೀಗ ಹುಸಿಯಾಗಿದೆ. ಈ ವಿಶ್ವವಿದ್ಯಾಲಯಗಳ ಕುಲಪತಿ, ಕುಲಸಚಿವರ ಸಂಚಾರಕ್ಕೆ ಸರಿಯಾಗಿ ವಾಹನ ವ್ಯವಸ್ಥೆ ಇಲ್ಲ. ಸಿಬ್ಬಂದಿ ವರ್ಗದವರ ವೇತನ, ಸೆಮಿಸ್ಟರ್ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಅಥವಾ ಯಾವುದೇ ಪರೀಕ್ಷಾ ಮಂಡಳಿ, ಅಧ್ಯಯನ ಮಂಡಳಿ ಸಭೆಗಳ ವೆಚ್ಚ ಸೇರಿ ದೈನಂದಿನ ಖರ್ಚು ವೆಚ್ಚ ನಿರ್ವಹಣೆಗೂ ಕಷ್ಟಕರ ಪರಿಸ್ಥಿತಿ ನಿರ್ಮಾಣವಾಗಿದೆ.

ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆ







ಹಾಸನ: ನಗರದ ಎಂ.ಕೃಷ್ಣ ಕಾನೂನು ಕಾಲೇಜಿನ ಮೂವರು ಹಳೆಯ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಪ್ರಕಟಗೊಂಡ ಸಿವಿಲ್ ನ್ಯಾಯಾಧೀಶರ ಪರೀಕ್ಷಾ ಫಲಿತಾಂಶ ದಲ್ಲಿ ಕೆ.ಬಿ.ಕೌಶಲ್, ಎಂ.ಎಸ್.ಮಣಿಕಂಠ ಮತ್ತು ಹೆಚ್.ಇ.ಶ್ವೇತಾ ಅವರು ಉತ್ತೀರ್ಣರಾಗುವ ಮೂಲಕ ಕಾಲೇಜಿಗೂ ಕೀರ್ತಿ ತಂದಿದ್ದಾರೆ. ನ್ಯಾಯಾಧೀಶರಾಗಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ಕಾಲೇಜು ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

ಕೋಡಿಮಠ ಸಮೀಪದ ಚೆಕ್ ಡ್ಯಾಂ ಕಾಮಗಾರಿ ಕಳಪೆ: ಆರೋಪ

• ಪ್ರಜೋದಯ ವರದಿ

ಹಾರನಹಳ್ಳಿ: ಅಂತರ್ಜಲ ವೃದ್ಧಿಗಾಗಿ ನಬಾರ್ಡ್ ವತಿಯಿಂದ ಕೋಡಿಮಠ ಸಮೀಪ ನಿರ್ಮಿಸಲಾಗುತ್ತಿರುವ ಚೆಕ್ ಡ್ಯಾಂ ಕಾಮಗಾರಿ ಸಂಪೂರ್ಣ ಕಳಪೆಯಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಬೇಸಿಗೆ ವೇಳೆ ಜಾನುವಾರುಗಳು ಹಾಗು ಕೃಷಿಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಚೆಕ್ ಡ್ಯಾಂ ನಿರ್ಮಿಸಲಾಗುತ್ತಿದೆ. ಹಾರನಹಳ್ಳಿ ಕೆರೆ ಕೋಡಿ ನೀರು ಹರಿಯುವ ರಾಜ



ಕಾಲುವೆಗೆ ಸಂಪರ್ಕಿಸುವ ಚೆಕ್ ಡ್ಯಾಂ ನಿರೀಕ್ಷಿತ ಮಟ್ಟದಲ್ಲಿ ನಿರ್ಮಾಣವಾದರೆ ಸಾಕಷ್ಟು ಅನುಕೂಲವಿದೆ. ಆದರೆ, ಕಾಲುವೆಯಲ್ಲಿರುವ ಕುರಚಲು ಗಿಡಗಳು ಬೆಳೆದು ತನ್ನ ಸ್ವರೂಪವನ್ನೇ ಕಳೆದುಕೊಂಡಿದೆ. ಕಾಮಗಾರಿಗಾಗಿ ಬಳಸಿರುವ ಕಲ್ಲುಗಳನ್ನು ಸರಿಯಾಗಿ ಜೋಡಿಸಿಲ್ಲ. ಬೇಕಾಬಿಟ್ಟಿ ಕೆಲಸ ಮಾಡುತ್ತಿದ್ದಾರೆಂಬ ದೂರುಗಳು ಕೇಳಿಬಂದಿವೆ.

ಮಳೆಗಾಲದಲ್ಲಿ ಕೆರೆ ತುಂಬಿದ ಸಂದರ್ಭದಲ್ಲಿ ಚೆಕ್ ಡ್ಯಾಂನಲ್ಲಿ ನೀರು ಇದ್ದರೆ ಭಾಗದಲ್ಲಿ ಅಂತರ್ಜಲ ಹೆಚ್ಚುತ್ತದೆ. ಕಾಲುವೆಯಲ್ಲಿ ಬೆಳೆದ ಗಿಡಗ ಳನ್ನು ಸರಿಯಾಗಿ ತೆಗೆಯದೆ ಕಾಮಗಾರಿ ಮಾಡುತ್ತಿದ್ದಾರೆ. ಕೆಲವು ಭಾಗಗಳಲ್ಲಿ ಮಣ್ಣು ಜರುಗದಂತೆ ಸರಿಯಾಗಿ ಕಲ್ಲು ಪಿಚಿಂಗ್ ಮಾಡಬೇಕು. ಕೋಡಿಮಠದ ಪಕ್ಕ ರಾಜ ಕಾಲುವೆ ಕೆಲಸ ನಡೆಯುತ್ತಿದ್ದು, ಈ ರಸ್ತೆಯಲ್ಲಿ ಜಾನುವಾರು, ರೈತರು ಜಮೀನುಗಳಿಗೆ ತಿರುಗುತ್ತಿದ್ದು ಕಲ್ಲುಗಳು ಕುಸಿಯದ ರೀತಿ ಯಲ್ಲಿ ರಾಜಕಾಲುವೆ ಇಕ್ಕೆಲಗಳಲ್ಲಿ ಗುಣಮಟ್ಟದ ಕಾಮಗಾರಿ ಮಾಡಬೇಕು.ಕಾಮಗಾರಿ ವಿವರದ ಬಗ್ಗೆ ನಾಮಫಲಕ ಹಾಕಬೇಕು. ಸಂಬಂಧಿಸಿದ ಇಲಾಖೆಯ ಅಭಿಯಂತರರು ಗುಣ ಮಟ್ಟಕ್ಕೆ ಆದ್ಯತೆ ನೀಡಬೇಕೆಂದು ಹಾರನಹಳ್ಳಿ ಕೋಡಿಮಠ ವ್ಯಾಪ್ತಿ ಹಾಗು ಹಾರನಹಳ್ಳಿ ಕೆರೆ ಅಚ್ಚುಕಟ್ಟು ಪ್ರದೇಶ ರೈತರು ಆಗ್ರಹಿಸಿದ್ದಾರೆ.

ಜೆಇಇ ಮುಖ್ಯ ಪರೀಕ್ಷೆ: ಸ್ಟೂಡೆಂಟ್ಸ್ ಪಿಯು ಕಾಲೇಜು ಸಾಧನೆ

• ಪ್ರಜೋದಯ ವರದಿ



ಹಾಸನ: ಜಿಲ್ಲೆಯ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಸ್ಟೂಡೆಂಟ್ಸ್ ಪಿಯು ಕಾಲೇಜು ಜೆಇಇ ಮುಖ್ಯ ಪರೀಕ್ಷೆಯಲ್ಲಿ ಅಮೋಘ ಸಾಧನೆ ಮಾಡಿದೆ.

ಕಾಲೇಜಿನ ಜಿ.ಪ್ರಣತಿ ಅವರು ಶೇ. 99.06 ಅಂಕ ಪಡೆಯುವ ಮೂಲಕ ಪಡೆಯುವ ಜಿಲ್ಲೆಯ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ (ಟಾಪರ್-1) ಮತ್ತು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆಯುವ ಮೂಲಕ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಸ್ಟೂಡೆಂಟ್ಸ್ ಕಾಲೇಜಿನಲ್ಲಿ ಒಟ್ಟು 40 ವಿದ್ಯಾರ್ಥಿಗಳು ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಗಳಿಸಿದ್ದು, ಎಸ್.ಕೆ.ಯುವರಾಜ್ (ಶೇ. 96.81), ಎಂ. ನಿತ್ಯ (ಶೇ.95.27), ಕುಂದನ್ ಗೌಡ (ಶೇ.92.64), ಮೋಹಿತ್ ಗೌಡ (ಶೇ.91.52) ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಪ್ರತಿವರ್ಷ ಸ್ಟೂಟೆಂಟ್ಸ್ ಪಿಯು ಕಾಲೇಜಿನ ಅಧಿಕ ವಿದ್ಯಾರ್ಥಿಗಳು ಐಐಟಿ ಪ್ರವೇಶ ಪಡೆಯುತ್ತಿದ್ದಾರೆ. ಇನ್ನುಳಿದ ಸಿಇಟಿ, ನೀಟ್, ಎನ್‌ಡಿಎ ಪರೀಕ್ಷೆ ಹಾಗು ಇಲಾಖೆ ಪರೀಕ್ಷೆಯಲ್ಲಿಯೂ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ.

ಜೆಇಇ ಅಡ್ವಾನ್ಸ್‌ಗೆ ಅರ್ಹತೆ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಮುರಳಿ ಮೋಹನ್, ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಅಭಿನಂದಿಸಿದ್ದಾರೆ.

ನೀರಿನ ಬಾಯ್ಲರ್‌ನಲ್ಲಿ ಶವ ಪತ್ತೆ | ಮರಣೋತ್ತರ ಪರೀಕ್ಷೆ ವರದಿ ಬಳಿಕ ಕ್ರಮವೆಂದ ಪೊಲೀಸರು

ಹಿಮತ್ ಸಿಂಗ್ ಕಾ ಫ್ಯಾಕ್ಟರಿಯಲ್ಲಿ ಕಾರ್ಮಿಕ ಆಕಸ್ಮಿಕ ಸಾವು

• ಪ್ರಜೋದಯ ವರದಿ

ಹಾಸನ: ನಗರದ ಕೈಗಾರಿಕಾ ವಲಯದಲ್ಲಿರುವ ಹಿಮತ್ ಸಿಂಗ್ ಕಾ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ನೀರಿನ ಬಾಯ್ಲರ್‌ಗೆ ಬಿದ್ದು ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.

ಅರಕಲಗೂಡು ತಾಲ್ಲೂಕು ನೇರಳೆಹಳ್ಳಿ ಗ್ರಾಮದ ರಮೇಶ್ ಎಂಬುವವರ ಪುತ್ರ ಎನ್.ಆರ್.ಪುನೀತ್ (28) ಮೃತ ದುರ್ದೈವಿ. ಕಳೆದ ಏಳು ತಿಂಗಳಿಂದ ಕೆಲಸಕ್ಕೆ ಸೇರಿದ್ದ ಪುನೀತ್ ಪ್ರೊಸೆಸಿಂಗ್ ವಿಭಾಗದಲ್ಲಿ ಕೆಲಸ ಮಾಡಿಕೊಂಡಿದ್ದ. ಹನುಮಂತಪುರದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದ ಆತ ವಾರಕ್ಕೊಮ್ಮೆ ಊರಿಗೆ ಹೋಗುತ್ತಿದ್ದ ಎನ್ನಲಾಗಿದೆ.

ಬುಧವಾರ ಬೆಳಿಗ್ಗೆ 9 ಗಂಟೆಗೆ ಕೆಲಸಕ್ಕೆ ಹೋಗಿದ್ದು, ಮಧ್ಯಾಹ್ನ 12ರ ಸಮಯದಲ್ಲಿ ಅವಘಡ ಸಂಭವಿಸಿದೆ. ಆದರೆ, ಸಂಜೆ 7ರ ವರೆಗೆ ಮಾಹಿತಿ ನೀಡಿರಲಿಲ್ಲವೆಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಪುನೀತ್‌ನ ಪೋಷಕರು, ಸಂಬಂಧಿಕರು ಹಾಗು ಹನುಮಂತಪುರ ನಿವಾಸಿಗಳು ಫ್ಯಾಕ್ಟರಿ ಮುಂದೆ ಜಮಾಯಿಸುತ್ತಿದ್ದಂತೆ ಗ್ರಾಮಾಂತರ ಠಾಣೆ ಪೊಲೀಸರು ದೌಡಾಯಿಸಿ ಪರಿಸ್ಥಿತಿ ನಿಯಂತ್ರಿಸಿದರು.

ತಕ್ಷಣವೇ ಮೃತದೇಹವನ್ನು ಹಿಮ್ಸ್‌ಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿದರು. ರಾತ್ರಿಪೂರ್ತಿ ಆಸ್ಪತ್ರೆ ಎದುರು ಕಾದು ಕುಳಿತಿದ್ದ ಮೃತ ಯುವಕನ ಸಂಬಂಧಿಕರು ಕಂಪನಿಯ ಮುಖ್ಯಸ್ಥರು ಸ್ಥಳಕ್ಕಾಗಮಿಸಿ ಸಾವಿಗೆ ಕಾರಣ ಹೇಳಬೇಕೆಂದು ಪಟ್ಟು ಹಿಡಿದರು. ಈ ಸಂಬಂಧ ಪೊಲೀಸರು ಹಾಗು ಸಾರ್ವಜನಿಕರ ನಡುವೆ ಜೋರು ವಾಗ್ವಾದ ನಡೆಯಿತು. ಗುರುವಾರ ಮಧ್ಯಾಹ್ನ 2ರ ಸಮಯದಲ್ಲಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಗೌಪ್ಯತೆ ಕಾಪಾಡಿಕೊಂಡಿದ್ದೇಕೆ ಫ್ಯಾಕ್ಟರಿ ಹಿಮತ್ ಸಿಂಗ್ ಕಾ ಫ್ಯಾಕ್ಟರಿಯಲ್ಲಿ ಸುಮಾರು 4 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಬಿಹಾರ, ಓರಿಸ್ಸಾ, ತಮಿಳುನಾಡು ಮೂಲದ ಕಾರ್ಮಿಕರೇ ಹೆಚ್ಚಿರುವ ಫ್ಯಾಕ್ಟರಿಯಲ್ಲಿ ಇಂತಹ ಅವಘಡ ಸಂಭವಿಸಿದರೂ ಹಲವು ಗಂಟೆಗಳ ವರೆಗೆ ಬಹಿರಂಗವಾಗದೇ ಇರುವುದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ. ಪ್ರೊಸೆಸ್ಸಿಂಗ್ ವಿಭಾಗದ ಬಾಯ್ಲರ್ ಬಳಿ ಕೆಲಸ ಮಾಡುತ್ತಿದ್ದ ಪುನೀತ್ ಕಾರ್ಖಾನೆಯ ಸಮವಸ್ತ್ರ ಧರಿಸಿದ್ದ. ಆಸ್ಪತ್ರೆಗೆ ಕರೆತರುವಾಗ ಬೇರೆ ಶರ್ಟ್ ಹಾಕಲಾಗಿತ್ತು. ಪ್ರಕರಣ ಮುಚ್ಚಿ ಹಾಕಲು ಕಂಪನಿಯವರೇ ಯೋಜನೆ ರೂಪಿಸಿರುವ ಅನುಮಾನವಿದೆ ಎಂದು ಮೃತನ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಫ್ಯಾಕ್ಟರಿ ಮುಖ್ಯಸ್ಥರು ಹಾಗು ಮೃತನ ಪೋಷಕರ ನಡುವೆ ರಾಜಿ ಸಂಧಾನ ನಡೆದಿದ್ದು ಆ ಬಳಿಕ ಪ್ರಕರಣ ಸುಖಾಂತ್ಯ ಕಂಡಿದೆ ಎನ್ನಲಾಗಿದೆ. ಮೃತನನ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ನೀಡುವ ವಾಗ್ದಾನವನ್ನು ಫ್ಯಾಕ್ಟರಿ ನೀಡಿದೆ. 10 ಲಕ್ಷ ರೂ.ಗಳನ್ನುತುರ್ತಾಗಿ ನೀಡುವುದು. ಪಿಎಫ್, ಇನ್ಸೂರೆನ್ಸ್ ಮೂಲಕ 10 ಲಕ್ಷ ರೂ. ತಲುಪಿಸುವುದು ಹಾಗು ಪುನೀತ್‌ನ ತಾಯಿಗೆ ಪ್ರತಿ ತಿಂಗಳು 6 ಸಾವಿರ ರೂ. ಪಿಂಚಣಿ ನೀಡುವುದಾಗಿ ಒಡಂಬಡಿಕೆ ಆಗಿದೆ ಎನ್ನಲಾಗಿದೆ.

ಅಸಹಜ ಸಾವು ಪ್ರಕರಣ ದಾಖಲು

ಪುನೀತ್ ಸಾವಿನ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಗ್ರಾಮಾಂತರ ಠಾಣೆ ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರಿಗೆ ಮಾಹಿತಿ ನೀಡಿದ್ದಾರೆ.

ಈ ಬಗ್ಗೆ ಮಾತನಾಡಿದ ಎಸ್‌ಪಿ ಶುಭಾನ್ವಿತಾ ಅವರು, ಘಟನಾ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ಇಲ್ಲ. ಬಾಯ್ಲರ್‌ನಲ್ಲಿ ಮೃತದೇಹ ಪತ್ತೆಯಾಗಿದೆ. ಯುವಕನ ಸಾವಿಗೆ ನಿಖರ ಕಾರಣ ಏನೆಂಬುದು ಗೊತ್ತಿಲ್ಲವಾದ್ದರಿಂದ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದೇವೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಮುಂದಿನ ತನಿಖೆ ಕೈಗೊಳ್ಳಲಾಗುವುದು. ಪೂರಕ ಸಾಕ್ಷ್ಯಾಧಾರಗಳು ಸಿಕ್ಕರೆ ತನಿಖೆ ಚುರುಕುಗೊಳಿಸಲಾಗುವುದೆಂದು ಹೇಳಿದರು.

ಜೆಇಇ : ಕೌಸ್ತುಭ ಶರ್ಮ ಜಿಲ್ಲೆಗೆ ಪ್ರಥಮ

• ಪ್ರಜೋದಯ ವರದಿ



ಹಾಸನ: ಜೆಇಇ ಪ್ರಥಮ ಆವೃತ್ತಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಗರದ ಬಿ.ಕಾಟಿಹಳ್ಳಿಯಲ್ಲಿರುವ ಉನ್ನತಿ ಶಿಕ್ಷಣ ಸಂಸ್ಥೆಯ ಎಪಿಜೆ ಕಾಲೇಜಿನ ವಿದ್ಯಾರ್ಥಿ ಪಿ.ಎನ್.ಕೌಸ್ತುಭ ಶರ್ಮ ಶೇ.99.30 ರಷ್ಟು ಅಂಕ ಗಳಿಸುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.

ಎಪಿಜೆ ಪಿ.ಯು ಕಾಲೇಜು ಸಂಸ್ಥಾಪಕ ಡಿ.ಮುರಳಿ ಅವರು ಮಾತನಾಡಿ, ನಮ್ಮ ಬೋಧಕ ವರ್ಗದ ಶ್ರಮದ ಜೊತೆಗೆ, ಈ ವಿದ್ಯಾರ್ಥಿಯ ನಿರಂತರ ಪರಿಶ್ರಮ ಮತ್ತು ಪಾಲಕರ ಸಹಕಾರ ಈ ಯಶಸ್ಸಿಗೆ ಅಡಿಪಾಯವಾಗಿದೆ. ಏಪ್ರಿಲ್ ಕೊನೆಯ ವಾರದಲ್ಲಿ ಜೆಇಇ ಎರಡನೇ ಆವೃತ್ತಿ ಹಾಗು ಮೇ ತಿಂಗಳಲ್ಲಿ ಜೆಇಇ ಅಡ್ವಾನ್ಸ್‌ನಲ್ಲಿ ಸಹ ನಮ್ಮ ಇನ್ನಷ್ಟು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವ ಭರವಸೆ ಇದೆ. ಕಳೆದ ಬಾರಿಯೂ ಇಬ್ಬರು ವಿದ್ಯಾರ್ಥಿಗಳು ಚೆನ್ನೈ ಐಐಟಿಗೆ ಪ್ರವೇಶ ಪಡೆದಿದ್ದಾರೆಂದರು.

E-mail : prajodayahsn@gmail.com
ಪ್ರಜೋದಯ
20 ಫೆಬ್ರವರಿ 2026 ಶುಕ್ರವಾರ

ಸಿನಿ ಪ್ರಜೋ

ಈ ವಾರ ಒಟಿಟಿ, ಚಿತ್ರಮಂದಿರಗಳಲ್ಲಿ ರಿಲೀಸ್

ತೆರೆ ಕಾಣಲಿರುವ ಸಿನಿಮಾಗಳು

ಪ್ರತಿ ವಾರ ಭಾರತೀಯ ಚಿತ್ರೋದ್ಯಮದಿಂದ ಹಾಗೂ ಹಾಲಿವುಡ್‌ನಿಂದ ಹಲವಾರು ಬಹುನಿರೀಕ್ಷಿತ ಸಿನಿಮಾಗಳು ಚಿತ್ರಮಂದಿರಗಳು ಹಾಗೂ ಒಟಿಟಿಯಲ್ಲಿ ರಿಲೀಸ್ ಆಗುತ್ತವೆ. ಕೆಲವು ಸೂಪರ್‌ಹಿಟ್ ಆದರೆ, ಇನ್ನೂ ಕೆಲವು ಫ್ಲಾಪ್ ಸಾಲಿಗೆ ಸೇರ್ಪಡೆಯಾಗುತ್ತೆ. ಸದ್ಯ ಈ ವಾರವು ಹಲವು ಭಾಷೆಯ ಚಿತ್ರಗಳು ಟಾಕೀಸ್ ಮತ್ತು ಒಟಿಟಿಗೆ ಲಗ್ಗೆಯಿಡಲಿವೆ. ಹಾಗಿದ್ದರೆ, ಯಾವೆಲ್ಲ ಸಿನಿಮಾ, ವೆಬ್ ಸರಣಿಗಳು ಎಂಟ್ರಿಕೊಟ್ಟಿವೆ? ಎಂಬುದರ ಸಂಪೂರ್ಣ ವಿವರ ಇಲ್ಲಿದೆ ನೋಡಿ.

ಈ ವಾರ ರಿಲೀಸ್ ಆಗಲಿರುವ (ಫೆ.16ರಿಂದ22)

1. ಕೆನ್ನಡಿ
ಒಟಿಟಿ: ಜೀ5
ರಿಲೀಸ್ ದಿನಾಂಕ: ಫೆ.20
2. ಫೈರ್ ಬ್ರೇಕ್
ಒಟಿಟಿ: ನೆಟ್‌ಫ್ಲಿಕ್ಸ್
ರಿಲೀಸ್ ದಿನಾಂಕ: ಫೆ.20
3. ಸ್ಟ್ರಿಪ್ ಲಾ
ಒಟಿಟಿ: ನೆಟ್‌ಫ್ಲಿಕ್ಸ್
ರಿಲೀಸ್ ದಿನಾಂಕ: ಫೆ.20
4. ಪವಾನೆ
ಒಟಿಟಿ: ನೆಟ್‌ಫ್ಲಿಕ್ಸ್
ರಿಲೀಸ್ ದಿನಾಂಕ: ಫೆ.20
5. ದಿ ಲಾಸ್ಟ್ ಥಿಂಗ್ ಹೀ ಟೋಲ್ಡ್ ಮೀ
ಒಟಿಟಿ: ಆ್ಯಪಲ್ ಟಿವಿ
ರಿಲೀಸ್ ದಿನಾಂಕ: ಫೆ.20
6. ದಿ ಸ್ವಿಡೀಶ್ ಕನೆಕ್ಷನ್
ಒಟಿಟಿ: ನೆಟ್‌ಫ್ಲಿಕ್ಸ್
ರಿಲೀಸ್ ದಿನಾಂಕ: ಫೆ.19
7. 56 ಡೇಸ್
ಒಟಿಟಿ: ಪ್ರೈಮ್ ವಿಡಿಯೋ
ರಿಲೀಸ್ ದಿನಾಂಕ: ಫೆ.18

ಯಾವೆಲ್ಲ ಸಿನಿಮಾಗಳು ರಿಲೀಸ್?

1. ಸೆಕೆಂಡ್ ಕೇಸ್ ಆಫ್ ಸೀತಾರಾಮ್ (ಕನ್ನಡ, ತಮಿಳು)
ತಾರಾಗಣ: ವಿಜಯ್ ರಾಘವೇಂದ್ರ, ಗೋಪಾಲ ಕೃಷ್ಣ ದೇಶಪಾಂಡೆ, ಉಷಾ ಭಂಡಾರಿ
ನಿರ್ದೇಶಕರು: ದೇವಿಪ್ರಸಾದ್ ಶೆಟ್ಟಿ
ಜಾನರ್: ಕ್ರೈಂ, ಥ್ರಿಲ್ಲರ್
ರಿಲೀಸ್ ದಿನಾಂಕ: ಫೆ.20
2. ಹೇ ಭಗವಾನ್ (ತೆಲುಗು)
ತಾರಾಗಣ: ಸುಹಾಸ್ ಪಗೋಲು, ಶಿವಾನಿ ನಗರಂ, ನರೇಶ್ ವಿಜಯ್ ಕೃಷ್ಣ, ವೆನ್ನೆಲ ಕಿಶೋರ್, ಅಜಯ್ ಘೋಷ್, ಅನ್ನಪೂರ್ಣಮ್ಮ
ನಿರ್ದೇಶಕರು: ಗೋಪಿ ಅಚ್ಚಾರ
ಜಾನರ್: ಕಾಮಿಡಿ, ಡ್ರಾಮಾ
ಬಿಡುಗಡೆ ದಿನಾಂಕ: ಫೆ.20
3. ತ್ರಿಶಂಕು (ತೆಲುಗು)
ತಾರಾಗಣ: ಅಮನ್ ಪ್ರೀತ್ ಸಿಂಗ್, ಪ್ರಾಚಿ ತೆಹ್ಲಾನ್, ಸುಮನ್, ರಶ್ಮಿ ಗೌತಮ್, ಮಹೇಶ್ ಅಚಂತ, ರಾಜಶೇಖರ್ ಅಣಿಂಗಿ
ನಿರ್ದೇಶಕರು: ಶ್ರೀ ಕೃಷ್ಣ ಗೊರ್ಲೆ
ಜಾನರ್: ಸೈ-ಫೈ ಡ್ರಾಮಾ, ಥ್ರಿಲ್ಲರ್
ಬಿಡುಗಡೆ ದಿನಾಂಕ: ಫೆ.20
4. ನವಾಬ್ ಕೆಫೆ (ತೆಲುಗು)
ತಾರಾಗಣ: ಶಿವ ಕಂದುಕುರಿ, ರಾಜೀವ್ ಕಣಕಾಲ, ತೇಜು ಅಶ್ವಿನಿ, ಚೈತನ್ಯ, ರಾಜ್ ಕುಮಾರ್ ಕಾಸಿರೆಡ್ಡಿ, ವಡ್ಲಮಣಿ ಶ್ರೀನಿವಾಸ್
ನಿರ್ದೇಶಕರು: ಪ್ರಮೋದ್ ಹರ್ಷ
ಜಾನರ್: ಕಾಮಿಡಿ, ಡ್ರಾಮಾ
ಬಿಡುಗಡೆ ದಿನಾಂಕ: ಫೆ.20
5. ಆಲ್ಫಾ (ಕನ್ನಡ)
ತಾರಾಗಣ: ಹೇಮಂತ್ ಕುಮಾರ್ ಎಂಎ, ಗೋಪಿಕಾ ಸುರೇಶ್, ಅಯನಾ, ಅಚ್ಯುತ್ ಕುಮಾರ್, ಬಾಲು ನಾಗೇಂದ್ರ, ಕಾರ್ತಿಕ್ ಮಹೇಶ್
ನಿರ್ದೇಶಕರು: ವಿಜಯ್ ನಾಗೇಂದ್ರ
ಜಾನರ್: ಆ್ಯಕ್ಷನ್, ಸಸ್ಪೆನ್ಸ್-ಥ್ರಿಲ್ಲರ್
ಬಿಡುಗಡೆ ದಿನಾಂಕ: ಫೆ.20
6. ಸೂರಿ ಅಣ್ಣಾ (ಕನ್ನಡ)
ತಾರಾಗಣ: ಸಲಗ ಸೂರಿ ಅಣ್ಣ, ಸಂಭ್ರಮ ಶ್ರೀ, ರವಿ ಕಾಳೆ, ಹರೀಶ್ ರೈ, ಜಿರಳೆ ಸುಧೀರ್, ಪ್ರಕಾಶ್ ತುಮಿನಾಡ್
ನಿರ್ದೇಶಕರು: ಸಲಗ ಸೂರಿ ಅಣ್ಣ
ಜಾನರ್: ಆ್ಯಕ್ಷನ್, ಕ್ರೈಂ-ಥ್ರಿಲ್ಲರ್
ಬಿಡುಗಡೆ ದಿನಾಂಕ: ಫೆ.20
7. 24 (ತಮಿಳು)
ತಾರಾಗಣ: ಪ್ರಣವ್ ಮೋಹನನ್, ಜಸ್ಟಿನ್ ವಿಜಯ್ ಆರ್, ಶ್ವೇತಾ ನಟರಾಜ್, ಎಂ. ಧನಲಕ್ಷ್ಮಿ, ಆಟೋ ಚಂದ್ರನ್, ಅಬ್ದುಲ್ ಬಸಿತ್
ನಿರ್ದೇಶಕರು: ಫೈರ್ ಕಾರ್ತಿಕ್
ಜಾನರ್: ಸಸ್ಪೆನ್ಸ್, ಕ್ರೈಂ-ಥ್ರಿಲ್ಲರ್
ಬಿಡುಗಡೆ ದಿನಾಂಕ: ಫೆ.20





ಮಾರ್ನಮಿ ಸಿನಿಮಾ ನೋಡಿ ಬೆಚ್ಚಿ ಬಿದ್ದ ಕರಾವಳಿ ಮಂದಿ : ಮಂಗಳೂರಿಗರಿಂದ ಚಿತ್ರಕ್ಕೆ ಫುಲ್ ಮಾರ್ಕ್ಸ್

ರಿತೀಶ್ ಶೆಟ್ಟಿ ನಿರ್ದೇಶನದ ಮಾರ್ನಮಿ ಚಿತ್ರವು ಕರಾವಳಿಯ ಆಚರಣೆಗಳು, ಹುಲಿವೇಷ ಮತ್ತು ಭಾವನಾತ್ಮಕ ಪ್ರೇಮಕಥೆಯನ್ನು ಒಳಗೊಂಡಿದ್ದು, ಫೆಬ್ರವರಿ 20ರಂದು ಈ ಸಿನಿಮಾ ತೆರೆಕಾಣುತ್ತಿದೆ. ಕಿರುತೆರೆ ನಟ ರಿತ್ವಿಕ್ ಮಠದ್ ಮತ್ತು ಪ್ರತಿಭಾವಂತ ನಟಿ ಚೈತ್ರಾ ಜೆ. ಆಚಾರ್ ಮುಖ್ಯ ಭೂಮಿಕೆಯಲ್ಲಿದ್ದು, ಕಿಚ್ಚ ಸುದೀಪ್ ಅವರ ಬೆಂಬಲ ಚಿತ್ರತಂಡಕ್ಕೆ ಆನೆಬಲ ನೀಡಿದೆ. ಇದೀಗ ಸಿನಿಮಾ ನೋಡಿದ ಕರಾವಳಿ ಮಂದಿ ಫುಲ್ ಮಾರ್ಕ್ಸ್ ಕೊಟ್ಟಿದ್ದಾರೆ.

ಹೊಸಬರ, ಹೊಸತನದ ಸಿನಿಮಾಗಳು ಇತ್ತೀಚೆಗೆ ಹೆಚ್ಚೆಚ್ಚು ಗಮನಸೆಳೆಯುತ್ತಿವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ ಮಾರ್ನಮಿ ಚಿತ್ರ. ಫೆ.20ರಂದು ರಾಜ್ಯಾದ್ಯಂತ ತೆರೆಗೆ ಬರಲು ಸಜ್ಜಾಗಿರುವ ಈ ಸಿನಿಮಾಕ್ಕೆ ನಟ ಕಿಚ್ಚ ಸುದೀಪ್ ಅವರು ಬೆಂಬಲವಾಗಿ ನಿಂತಿರುವುದು ಚಿತ್ರತಂಡಕ್ಕೆ ಆನೆಬಲ ಸಿಕ್ಕಂತಾಗಿದೆ.

ಇನ್ನು, ಕಿರುತೆರೆಯಲ್ಲಿ ಹೆಸರು ಮಾಡಿರುವ ರಿತ್ವಿಕ್ ಮಠದ್ ಮತ್ತು ಚೈತ್ರಾ ಜೆ. ಆಚಾರ್ ಮುಖ್ಯಭೂಮಿಕೆಯಲ್ಲಿರುವ ಮಾರ್ನಮಿ ಚಿತ್ರದ ಮೂಲಕ ಕರಾವಳಿ ಸಂಸ್ಕೃತಿ, ಆಚರಣೆ ಭಾಷೆ, ಸಂಸ್ಕೃತಿ ಹುಲಿವೇಷ ಹೀಗೆ ಹಲವು ವಿಷಯಗಳನ್ನು ಕಟ್ಟಿಕೊಡಲಾಗಿದೆ.

ಎರಡು ಬಾರಿ ಚಿತ್ರದ ಬಿಡುಗಡೆಯ ದಿನಾಂಕ ಪ್ರಕಟಿಸಿ ಮುಂದೂಡಿದ್ದ ಚಿತ್ರತಂಡ ಈ ಬಾರಿ ಅಂದುಕೊಂಡ ದಿನದಂದು ಚಿತ್ರ ಬಿಡುಗಡೆ ಮಾಡುವುದಾಗಿ ಹೇಳಿಕೊಂಡಿದೆ. ಚಿತ್ರವನ್ನು ನಿಶಾಂತ್, ಶಿಲ್ಪಾ ನಿಶಾಂತ್ ನಿರ್ಮಾಣ ಮಾಡಿದ್ದು, ರಿತೀಶ್ ಶೆಟ್ಟಿ ನಿರ್ದೇಶನ ಹೇಳಿದ್ದಾರೆ.

ಸಿನಿಮಾದಲ್ಲಿ ಉತ್ತಮವಾದ ಕಥೆ ಇದೆ. ಹುಲಿ ವೇಷ, ಕರಾವಳಿ ಭಾಗದ ಪ್ರೇಮಕಥೆ, ಆಕ್ಷನ್, ಎಮೋಷನ್, ಸಂಬಂಧಗಳ ಬೆಲೆ ಕಟ್ಟಿಕೊಡಲಾಗಿದೆ. ಕರಾವಳಿ ಭಾಗದಲ್ಲಿ ಮಾರ್ನಮಿಯೇ ಮಂಗಳೂರಿನ ದಸರಾ. ಈ ಚಿತ್ರದಲ್ಲಿನ ಚೇತು, ದೀಕ್ಷಾ ಪಾತ್ರಗಳು ಇಷ್ಟವಾಗಲಿದೆ. ಜನರ ಪ್ರತಿಕ್ರಿಯೆಗೆ ಎದುರು ನೋಡುತ್ತಿದ್ದ ಕರಾವಳಿ ಜನರ ಆರ್ಭಟಕ್ಕೆ ಬೆಚ್ಚಿಬಿದ್ದಿದ್ದಾರೆ

ಹೌದು ಮಂಗಳೂರಿನಲ್ಲಿ ಮಾರ್ನಮಿ ಸಿನಿಮಾದ ಪ್ರಿಮಿಯರ್ ಶೋ ನೋಡಿದ ಸಿನಿಮಾಭಿಮಾನಿಗಳು ಒಳ್ಳೊಳ್ಳೆ ವಿಮರ್ಶೆ ಕೊಟ್ಟಿದ್ದಾರೆ. ಸಿನಿಮಾವನ್ನ ಹಾಡಿಹೊಗಳಿದ್ದಾರೆ. ಮೊದಲ ಹಂತದ ಗೆಲುವು ಚಿತ್ರತಂಡಕ್ಕೆ ಸಿಕ್ಕಿದ್ದು ಸಖತ್ ಖುಷಿ ಆಗಿದ್ದಾರೆ. ಒಟ್ಟಾರೆ ಮಾರ್ನಮಿ ಚಿತ್ರಕ್ಕೆ ಮಂಗಳೂರಿಗರು ಫುಲ್ ಮಾರ್ಕ್ಸ್ ಕೊಟ್ಟಿದ್ದಾರೆ..

ಬಹುನಿರೀಕ್ಷಿತ ಲವ್ ಮಾಕ್ಟೇಲ್ 3 ಚಿತ್ರದ ಒಬ್ಬಂಟಿಯಾದೆ ನಾ..

ಲವ್ ಮಾಕ್ಟೇಲ್ 3 ಚಿತ್ರದ ಒಬ್ಬಂಟಿಯಾದೆ ನಾ.. ಲಿರಿಕಲ್ ವಿಡಿಯೋ ಸಾಂಗ್ ಬಿಡುಗಡೆಯಾಗಿದೆ. ರಾಘವೇಂದ್ರ ಕಾಮತ್ ಬರೆದಿರುವ ಈ ಹಾಡಿಗೆ ನಕುಲ್ ಅಭಯಂಕರ್ ಸಂಗೀತ ಸಂಯೋಜಿಸಿದ್ದಾರೆ. ಪ್ರೇಮಿಗಳ ದಿನದ ಪ್ರಯುಕ್ತ ರಿಲೀಸ್ ಆಗಿರುವ ಈ ಹಾಡು ಪ್ರೇಮಿಗಳಿಗೆ ಹತ್ತಿರವಾಗುತ್ತಿದೆ.

ಲವ್ ಮಾಕ್ಟೇಲ್ ಹಾಗೂ ಲವ್ ಮಾಕ್ಟೇಲ್ 2 ಚಿತ್ರಗಳು ಸೂಪರ್ ಸಕ್ಸಸ್ ಆಗಿವೆ. ಇದೀಗ ಲವ್ ಮಾಕ್ಟೇಲ್ 3 ಸಿನಿಮಾ ಬರುತ್ತಿದೆ. ಬಹುನಿರೀಕ್ಷಿತ ಲವ್ ಮಾಕ್ಟೇಲ್ 3 ಚಿತ್ರಕ್ಕೆ ಡಾರ್ಲಿಂಗ್ ಕೃಷ್ಣ ನಿರ್ದೇಶನ ಮಾಡಿ, ನಾಯಕನಾಗಿಯೂ ನಟಿಸುತ್ತಿದ್ದಾರೆ. ಇತ್ತೀಚೆಗಷ್ಟೇ ತಂದೆ ಮಗಳ ಬಾಂಧವ್ಯದ ಸೆಲೆಯಂತಿದ್ದ ಈ ಸಿನಿಮಾದ ಹಾಡೊಂದು ಬಿಡುಗಡೆಗೊಂಡಿತ್ತು. ಈ ಹಿಂದಿನ ಎರಡು ಆವೃತ್ತಿಗಳನ್ನು ಕಣ್ತುಂಬಿಕೊಂಡ್ದ ಅನೇಕರು ಟ್ರೈಲರಿಗಾಗಿ ಕಾತರರಾಗಿರುವಾಗಲೇ ಪ್ರೇಮಿಗಳ ದಿನಕ್ಕೆ ಉಡುಗೊರೆ ಎಂಬಂತೆ ಒಬ್ಬಂಟಿಯಾದೆ ನಾ ಎಂಬ ಲಿರಿಕಲ್ ವೀಡಿಯೋ ಹಾಡೊಂದನ್ನು ಬಿಡುಗಡೆಗೊಳಿಸಲಾಗಿದೆ. ಈಗಾಗಲೇ ಪ್ರೇಮಿಗಳ ದಿನದ ಗುಂಗಿನಲ್ಲಿ ತೇಲಿಬಂದಂತಿರೋ ಈ ಹಾಡು ಸಾಮಾಜಿಕ ಜಾಲತಾಣಗಳ ತುಂಬೆಲ್ಲ ವೈರಲ್ ಆಗುತ್ತಾ, ಮೆಚ್ಚುಗೆ ಗಳಿಸುತ್ತಿದೆ.

ಮಾತು ಮೌನವಾಗಿದೆ ಶೋಕ ಭಾವ ಮೂಡಿದೆ.. ಎಂಬ ಸಾಲುಗಳೊಂದಿಗೆ ಶುರುವಾಗುವ ಈ ಹಾಡನ್ನು ರಾಘವೇಂದ್ರ ಕಾಮತ್ ಅರ್ಥಪೂರ್ಣವಾಗಿ ಬರೆದಿದ್ದಾರೆ. ನಕುಲ್ ಅಭಯಂಕರ್ ಸಂಗೀತ ಸಂಯೋಜನೆ ಮಾಡಿ, ಸ್ವತಃ ಧ್ವನಿಯಾಗಿದ್ದಾರೆ. ಕೆಲವೊಂದಷ್ಟು ಹಾಡುಗಳು ಮೆಲ್ಲಗೆ ಒಳಗಿಳಿದು, ಬಹುದಿನಗಳ ನಂತರ ಆವರಿಸಿಕೊಳ್ಳುತ್ತವೆ. ಮತ್ತೊಂದಷ್ಟು ಹಾಡುಗಳು ಕೇಳಿದಾಕ್ಷಣವೇ ಎದೆಗಿಳಿದು ಕಾಡುತ್ತವೆ. ಈ ಹಾಡು ಎರಡನೇ ಸಾಲಿಗೆ ಸೇರ್ಪಡೆಗೊಳ್ಳುವ ಗುಣ ಹೊಂದಿದೆ. ಪ್ರೇಮಿಗಳ ದಿನದಂದೇ ಬಿಡುಗಡೆಯಾಗಿರುವ ಈ ಹಾಡು, ಎವರ್‌ಗ್ರೀನ್ ಪ್ರೇಮಗೀತೆಗಳ ಸಾಲಿನಲ್ಲಿ ದಾಖಲಾಗುವ ಗುಣ ಹೊಂದಿದೆ. ಇಂಥದ್ದೊಂದು ಅಭಿಪ್ರಾಯ ಕೇಳುಗರ ಕಡೆಯಿಂದಲೇ ವ್ಯಕ್ತವಾಗುತ್ತಿದೆ.

ಡಾರ್ಲಿಂಗ್ ಕೃಷ್ಣ ಲವ್ ಮಾಕ್ಟೇಲ್ ಸರಣಿಯ ಮೊದಲ ಆವೃತ್ತಿಯಲ್ಲಿಯೇ ಹಾಡುಗಳಿಗೆ ವಿಶೇಷ ಒತ್ತು ಕೊಟ್ಟಿದ್ದರು. ಎರಡನೇ ಆವೃತ್ತಿಯಲ್ಲಿಯೂ ಆ ಪರಿಪಾಠ ಮುಂದುವರೆದಿತ್ತು. ಆ ಎರಡೂ ಸರಣಿಗಳ ಗೆಲುವಿನಲ್ಲಿ ಹಾಡುಗಳ ಪಾತ್ರವೂ ಇತ್ತು. ಇದೀಗ ಮೂರನೇ ಭಾಗದಲ್ಲಿಯೂ ಕೂಡ ಅದು ಮುಂದುವರೆದಿದೆ.

ಅಂದ ಹಾಗೆ, ಈಗಾಗಲೇ ಹಾಡುಗಳ ಮೂಲಕ ಪ್ರೇಕ್ಷಕರಿಗೆ ಹತ್ತಿರಾಗಿರುವ ಲವ್ ಮಾಕ್ಟೇಲ್ 3 ಚಿತ್ರ ಇದೇ ಏಪ್ರಿಲ್ 10 ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ. ಕ್ರಿಸ್ಮಿ ಬ್ಯಾನರಿನಡಿಯಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಪತ್ನಿ ಮಿಲನಾ ನಾಗರಾಜ್ ಲವ್ ಮಾಕ್ಟೇಲ್ 3 ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್, ಸಂವೃತ, ಅಮೃತಾ ಅಯ್ಯಂಗಾರ್, ರಚೆಲ್ ಡೇವಿಡ್, ಅಭಿಲಾಶ್ ದಳಪತಿ ಮುಂತಾದವರ ದೊಡ್ಡ ತಾರಾಗಣ ಈ ಚಿತ್ರಕ್ಕಿದೆ.

ಲಿರಿಕಲ್ ವಿಡಿಯೋ ಸಾಂಗ್ ಬಿಡುಗಡೆ

ಹೈಲೈಟ್ಸ್ :

- **ಲವ್ ಮಾಕ್ಟೇಲ್ 3 ಚಿತ್ರದ ಮತ್ತೊಂದು ಹಾಡು ರಿಲೀಸ್**
- **ಬಿಡುಗಡೆಯಾಗಿದೆ ಒಬ್ಬಂಟಿಯಾದೆ ನಾ.. ಲಿರಿಕಲ್ ಹಾಡು**
- **ಡಾರ್ಲಿಂಗ್ ಕೃಷ್ಣ ನಿರ್ದೇಶನದ ಲವ್ ಮಾಕ್ಟೇಲ್ 3**

ಪ್ರೀತಿ, ನಂಬಿಕೆ ದ್ರೋಹ, ಮತಾಂತರ: ಭಯಾನಕ ಅಂಶಗಳನ್ನು ತೆರೆದಿಟ್ಟ ದಿ ಕೇರಳ ಸ್ಟೋರಿ-2 ಟ್ರೇಲರ್

ಹಿಂದೂ ಯುವತಿಯರನ್ನು ಮತಾಂತರ ಮಾಡಿ ಹಿಂಸಿಸುವ ಕಥಾಹಂದರದ ದಿ ಕೇರಳ ಸ್ಟೋರಿ ಎರಡನೇ ಭಾಗದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾವು ಇದೇ ಫೆಬ್ರವರಿ 27 ರಂದು ತೆರೆಗೆ ಬರಲಿದೆ.

ಪ್ರೀತಿ ಹೆಸರಿನಲ್ಲಿ ಹಿಂದೂ ಯುವತಿಯರ ಪುಸಲಾಯಿಸಿ ಮತಾಂತರ ಮಾಡಲಾಗುತ್ತದೆ ಎಂದು ತೋರಿಸುವ ದಿ ಕೇರಳ ಸ್ಟೋರಿ-2 ಗೋಸ್ ಬಿಯಾಂಡ್ ಸಿನಿಮಾದ ಟ್ರೇಲರ್ ಮಂಗಳವಾರ ಬಿಡುಗಡೆಯಾಗಿದೆ. ಇದು ದಿ ಕೇರಳ ಸ್ಟೋರಿ ಸಿನಿಮಾದ ಮುಂದುವರಿದ ಭಾಗವಾಗಿದೆ.

ಬಹುನಿರೀಕ್ಷಿತ ಸಿನಿಮಾವನ್ನು ವಿಪುಲ್ ಅಮೃತ್‌ಲಾಲ್ ಶಾ ಮತ್ತು ಸನ್‌ಶೈನ್ ಪಿಕ್ಚರ್ಸ್ ನಿರ್ಮಾಣ ಮಾಡಿರುವ ಸಿನಿಮಾದ ಟ್ರೇಲರ್ ಮತಾಂತರದ ಭಯಾನಕ ಅಂಶಗಳನ್ನು ಬಯಲು ಮಾಡಿದೆ.

ಸನ್‌ಸೈನ್ ಪಿಕ್ಚರ್ಸ್ ತನ್ನ ಎಕ್ಸ್ ಖಾತೆಯಲ್ಲಿ ಸಿನಿಮಾದ ಟ್ರೇಲರ್ ಹಂಚಿಕೊಂಡಿದ್ದು, ಅವರು ನಮ್ಮ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡಿದ್ದಾರೆ. ಅವರು ನಮ್ಮ ನಂಬಿಕೆಯನ್ನು ಮುರಿದರು. ಅವರು ನಮ್ಮ ಭವಿಷ್ಯವನ್ನು ಹಾಳು ಮಾಡಿದರು. ಆದರೆ, ಈ ಸಲ ನಾವು ಮೌನವಾಗಿರುವುದಿಲ್ಲ, ಈ ಸಲ ನಾವು ಸಹಿಸಿಕೊಳ್ಳುವುದಿಲ್ಲ, ಹೋರಾಡುತ್ತೇವೆ ಎಂದು ಬರೆದುಕೊಂಡಿದೆ.

ಟ್ರೇಲರ್‌ನಲ್ಲಿ ಏನಿದೆ?: ಮುಂದಿನ 25 ವರ್ಷಗಳಲ್ಲಿ ಭಾರತವನ್ನು ಇಸ್ಲಾಮಿಕ್ ದೇಶವಾಗಿ ಪರಿವರ್ತಿಸಬಹುದು ಎಂಬ ಭಯಾನಕ ಘೋಷಣೆಯೊಂದಿಗೆ ಟ್ರೇಲರ್ ಪ್ರಾರಂಭವಾಗುತ್ತದೆ. ನಂತರ, ರಾಜಸ್ಥಾನದಲ್ಲಿನ ಘಟನೆಯನ್ನು ನಿರೂಪಿಸಲಾಗಿದೆ. ಅಲ್ಲಿ ಒಂದು ಹಿಂದೂ ಕುಟುಂಬವು ತಮ್ಮ 16 ವರ್ಷದ ಮಗಳನ್ನು ಬಲವಂತವಾಗಿ ಮತಾಂತರಕ್ಕೆ ಒಳಪಡಿಸಲಾಗಿದೆ ಎಂದು ಆರೋಪಿಸಿ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ಪೊಲೀಸ್ ಠಾಣೆಗೆ ಬರುತ್ತದೆ. ಅಲ್ಲಿ ಆ ಪೋಷಕರ ಕಣ್ಣೀರಿಡುವುದನ್ನು ತೋರಿಸಲಾಗಿದೆ.

ಅಲ್ಲಿಂದ, ಕಥೆಯು ಮಧ್ಯಪ್ರದೇಶಕ್ಕೆ ಸಾಗುತ್ತದೆ. ಅಲ್ಲಿನ ಹಿಂದೂ ಯುವತಿಯನ್ನು ಮತ್ತೊಂದು ಸಮುದಾಯದ ಯುವಕ ಪ್ರೇಮದ ಜಾಲದಲ್ಲಿ ಬೀಳಿಸಿ ವಿವಾಹವಾಗುತ್ತಾನೆ. ಬಳಿಕ ಆಕೆಯನ್ನು ಬಲವಂತವಾಗಿ ಧರ್ಮಾಂತರಕ್ಕೆ ಒಳಪಡಿಸುತ್ತಾನೆ.

ಮೂರನೇ ವಿದ್ಯಮಾನವು ಕೇರಳದಲ್ಲಿ ನಡೆಯುತ್ತದೆ. ಒಬ್ಬ ಮುಸ್ಲಿಂ ಯುವಕ ತನ್ನ ಹಿಂದೂ ಗೆಳತಿಯೊಂದಿಗೆ ಲಿವ್ ಇನ್ ಸಂಬಂಧದಲ್ಲಿ ಇರಲು ಕೇಳಿಕೊಳ್ಳುತ್ತಾನೆ. ಆದರೆ, ಆಕೆ ತಾನು ಮತಾಂತರಗೊಳ್ಳುವುದಿಲ್ಲ ಎಂದು ಹೇಳುತ್ತಾಳೆ. ಮೊದಲು ಒಪ್ಪಿಕೊಳ್ಳುವ ಆತ, ನಂತರ ತನ್ನ ನಿಜವಾದ ಮುಖವಾದ ಪ್ರದರ್ಶಿಸಿ ಆಕೆಯನ್ನು ಹಿಂಸಿಸಲು ಆರಂಭಿಸುತ್ತಾನೆ. ಟ್ರೇಲರ್ ಪೂರ್ತಿ ಮೂವರು ಹಿಂದು ಯುವತಿಯರು ಅನುಭವಿಸುವ ಕರಾಳತೆಯನ್ನು ತೋರಿಸಿದೆ. ಯುವತಿಯೊಬ್ಬಳಿಗೆ ಬಲವಂತವಾಗಿ ಬೀಫ್ (ದನದ ಮಾಂಸ) ತಿನ್ನಿಸುವ ದೃಶ್ಯವು ಮತಾಂತರದ ಮತ್ತೊಂದು ಮಜಲನ್ನು ತೋರಿಸುತ್ತದೆ.

ಫೆಬ್ರವರಿ 27ರಂದು ಬಿಡುಗಡೆ: ಅಂದಹಾಗೆ, ದಿ ಕೇರಳ ಸ್ಟೋರಿ-2 ಗೋಸ್ ಬಿಯಾಂಡ್ ಸಿನಿಮಾವನ್ನು ಕಾಮಾಖ್ಯ ನಾರಾಯಣ್ ಸಿಂಗ್ ಅವರು ನಿರ್ದೇಶಿಸಿದ್ದಾರೆ. ಉಲ್ಕಾ ಗುಪ್ತಾ, ಅದಿತಿ ಭಾಟಿಯಾ ಮತ್ತು ಐಶ್ವರ್ಯಾ ಓಜಾ ಅವರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಮೂವರೂ ಮುಸ್ಲಿಂ ಯುವಕರ ಪ್ರೇಮಜಾಲದಲ್ಲಿ ಸಿಲುಕಿ ನಂತರ ನರಕ ಅನುಭವಿಸುವುದನ್ನು ತೋರಿಸಲಾಗಿದೆ.

2022 ರಲ್ಲಿ ತೆರೆಕಂಡ ದಿ ಕೇರಳ ಸ್ಟೋರಿಯ ಮುಂದುವರಿದ ಭಾಗವಾಗಿರುವ ಈ ಸಿನಿಮಾ ಫೆಬ್ರವರಿ 27 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲು ಸಜ್ಜಾಗಿದೆ.

ದಿ ರೈಸ್ ಆಫ್ ಅಶೋಕ ಮೂಲಕ ಮತ್ತೆ ಮಿಂಚಲು ರೆಡಿ ಆದ ಸತೀಶ್; ಗಮನ ಸೆಳೆದ ಟ್ರೇಲರ್

ನೀನಾಸಂ ಸತೀಶ್ ಅಭಿನಯದ ದಿ ರೈಸ್ ಆಫ್ ಅಶೋಕ ಫೆಬ್ರವರಿ 27 ರಂದು ತೆರೆಗೆ ಬರಲಿದೆ. ಇತ್ತೀಚೆಗೆ ಬಿಡುಗಡೆಯಾದ ಟ್ರೇಲರ್ ಗಮನ ಸೆಳೆದಿದ್ದು, ಜಾತಿ ತಾರತಮ್ಯದ ವಿರುದ್ಧ ಸಿಡಿದೇಳುವ ಅಶೋಕನ ಪಾತ್ರದಲ್ಲಿ ಸತೀಶ್ ಭರ್ಜರಿ ಆ್ಯಕ್ಷನ್ ಮಾಡಿದ್ದಾರೆ. ಬಡ ಕುಟುಂಬದ ಅಶೋಕ ಹೇಗೆ ಸಮಾಜದ ದಬ್ಬಾಳಿಕೆ ವಿರುದ್ಧ ಹೋರಾಡುತ್ತಾನೆ ಎಂಬುದನ್ನು ಟ್ರೇಲರ್ ತೋರಿಸಿದೆ.

ನೀನಾಸಂ ಸತೀಶ್ ಅವರು ಹಲವು ಸೂಪರ್ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಅವರು ಈಗ ದಿ ರೈಸ್ ಆಫ್ ಅಶೋಕ ಹೆಸರಿನ ಸಿನಿಮಾ ಮೂಲಕ ಪ್ರೇಕ್ಷಕರ ಎದುರು ಬರಲು ರೆಡಿ ಆಗಿದ್ದಾರೆ. ಫೆಬ್ರವರಿ 27ರಂದು ಸಿನಿಮಾ ತೆರೆಗೆ ಬರುತ್ತಿದೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿ ಗಮನ ಸೆಳೆದಿದೆ. ಜಾತಿ ತಾರತಮ್ಯದ ವಿರುದ್ಧ ಸಿಡಿದೇಳುವ ಅಶೋಕನಾಗಿ ನೀನಾಸಂ ಸತೀಶ್ ಕಾಣಿಸಿಕೊಂಡಿದ್ದಾರೆ. ಅವರು ಈ ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ಮೆರೆದಿದ್ದಾರೆ.

ಅಶೋಕ ಓರ್ವ ಬಡ ಕುಟುಂಬದ ಹಿನ್ನೆಲೆಯಿಂದ ಬಂದವನು. ಆತ ನಗರಕ್ಕೆ ಹೋಗಿ ಓದಿ ಮರಳಿ ಊರಿಗೆ ಬರುತ್ತಾನೆ. ಆತ ರೆವೆನ್ಯೂ ಡಿಪಾರ್ಟ್‌ಮೆಂಟ್ ಸೇರುವ ಪ್ರಯತ್ನ ಮಾಡುತ್ತಾನೆ. ಆಗ ಶುರುವಾಗುತ್ತೆ ಊರ ಪಾಳೇಗಾರನ ದಬ್ಬಾಳಿಕೆ. ಈ ವ್ಯವಸ್ಥೆಯ ವಿರುದ್ಧ ಅಶೋಕ ಸಿಡಿದೇಳುತ್ತಾನೆ. ಇದಿಷ್ಟು ವಿಷಯ ಟ್ರೇಲರ್‌ನಲ್ಲಿ ತೋರಿಸಲಾಗಿದೆ.

ಸತೀಶ್ ಅವರು ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಒಂದಷ್ಟು ಗೆಳೆಯರನ್ನು ಸಂಪಾದಿಸಿದ್ದಾರೆ. ಅವರೆಲ್ಲರೂ ಆಗಮಿಸಿ, ದಿ ರೈಸ್ ಆಫ್ ಅಶೋಕ ಟ್ರೇಲರ್ ಲಾಂಚ್ ಈವೆಂಟ್‌ಗೆ ಸಾತ್ ಕೊಟ್ಟರು. ರವಿಚಂದ್ರನ್, ದುನಿಯಾ ವಿಜಯ್, ವಸಿಷ್ಠ ಸಿಂಹ, ಲೂಸ್ ಮಾದ ಯೋಗಿ, ದಿಗಂತ್ ಮೊದಲಾದವರು ಟ್ರೇಲರ್ ಲಾಂಚ್ ಈವೆಂಟ್‌ನಲ್ಲಿ ಇದ್ದರು.

ಟ್ರೇಲರ್ ನೋಡಿದವರಿಗೆ ನಿರೀಕ್ಷೆ ಮೂಡಿದೆ. ಇದು ರೈಸ್ ಆಫ್ ಅಶೋಕ ಅಲ್ಲ, ರೈಸ್ ಆಫ್ ಸತೀಶ ಆಗಲಿ, ಆಗುತ್ತೆ ಎಂದು ಬಂದ ಸೆಲೆಬ್ರಿಟಿಗಳು ಹಾರೈಸಿದರು. ಸಪ್ತಮಿ ಗೌಡ, ಸಂಪತ್, ರವಿಶಂಕರ್ ಮೊದಲಾದವರು ಸಿನಿಮಾದಲ್ಲಿ ನಟಿಸಿದ್ದಾರೆ. ಈ ಚಿತ್ರವನ್ನು ವಿನೋದ್ ದೊಂಡಾಲೆ ನಿರ್ದೇಶನ ಮಾಡಿದ್ದಾರೆ. ಅವರು ನಿಧನ ಹೊಂದಿದ ಬಳಿಕ ಸತೀಶ್ ಅವರು ಚಿತ್ರವನ್ನು ಮುಂದಕ್ಕೆ ತೆಗೆದುಕೊಂಡು ಹೋದರು. ಸತೀಶ್ ಕೂಡ ಚಿತ್ರದ ನಿರ್ಮಾಪಕರಲ್ಲಿ ಒಬ್ಬರು. ಈಗ ಎಲ್ಲಾ ಅಡೆತಡೆಗಳನ್ನು ದಾಟಿ ಸಿನಿಮಾ ರಿಲೀಸ್ ಹಂತ ತಲುಪಿದೆ.

ವೀರ ಕಂಬಳ ಟ್ರೈಲರ್ ಬಿಡುಗಡೆ : ತುಳುನಾಡಿನ ವೈಭವ ಅನಾವರಣ

ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದಲ್ಲಿ ಮೂಡಿ ಬಂದಿರುವ ಬಹುನಿರೀಕ್ಷಿತ ಚಿತ್ರ ವೀರ ಕಂಬಳ. ತುಳುನಾಡಿನ ಜನಜೀವನ ದೊಂದಿಗೆ ಹೊಸೆದುಕೊಂಡಿರುವ ಕಂಬಳ ಎಂಬುದು ಬಹು ಹಿಂದಿನಿಂದಲೂ ಚಿತ್ರರಂಗ ದವರನ್ನು ಸೆಳೆಯುತ್ತಾ ಬಂದಿದೆ. ಆದರೆ, ಅದನ್ನು ಇಡಿಯಾಗಿ ದೃಶ್ಯಗಳಲ್ಲಿ ಹಿಡಿದಿಡುವಂಥಾ ಪ್ರಯತ್ನಗಳು ನಡೆದಿರಲಿಲ್ಲ. ಮೂಲತಃ ದಕ್ಷಿಣ ಕನ್ನಡ ಭಾಗದೊಂದಿಗೆ ಕರುಳುಬಳ್ಳಿಯ ಬಂಧ ಹೊಂದಿರುವ ರಾಜೇಂದ್ರ ಸಿಂಗ್ ಬಾಬು ಅವರು ದಶಕಗಟ್ಟಲೆ ಶ್ರಮವಹಿಸಿ ಅಂಥಾದ್ದೊಂದು ಪ್ರಯತ್ನ ನಡೆಸಿದ್ದಾರೆ.

ಈ ಚಿತ್ರವನ್ನು ಬಾಬಾಸ್ ಬ್ಲೆಸಿಂಗ್ ಫಿಲ್ಮ್ಸ್ ಬ್ಯಾನರಿನಡಿಯಲ್ಲಿ ಡಾ. ವಿನಿತ ವಿಜಯ್ ಕುಮಾರ್ ರೆಡ್ಡಿ ಹಾಗೂ ಅರುಣ್ ರೈ ತೊಡಾರ್ ನಿರ್ಮಾಣ ಮಾಡಿದ್ದಾರೆ. ರಾಜೇಶ್ ಕುಡ್ಲ ಕಾರ್ಯಕಾರಿ ನಿರ್ಮಾಪಕರಾಗಿ ಜೊತೆಯಾಗಿದ್ದಾರೆ. ಆದಿತ್ಯ, ಪ್ರಕಾಶ್ ರೈ, ರವಿಶಂಕರ್ ಪ್ರಧಾನ ಪಾತ್ರಗಳಲ್ಲಿ ನಟಿಸಿದ್ದರೆ, ರಾಧಿಕಾ ನಾರಾಯಣ್ ವಿಶೇಷ ಪಾತ್ರಕ್ಕೆ ಜೀವ ತುಂಬಿದ್ದಾರೆ. ತುಳು ಭಾಷೆಯಲ್ಲಿಯೂ ಬಿಡುಗಡೆಗೊಳ್ಳಲಿರುವ ಸದರಿ ಚಿತ್ರದಲ್ಲಿ ನವೀನ್ ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು ಸೇರಿದಂತೆ ಪ್ರಸಿದ್ಧ ತುಳು ರಂಗಭೂಮಿ ಹಿನ್ನೆಲೆಯ ನಟರು ನಟಿಸಿದ್ದಾರೆ. ವಿಜಯ್ ಕುಮಾರ್ ಕೊಡಿಯಾಲ್ಬೈಲ್ ಚಿತ್ರಕಥೆ ಸಂಭಾಷಣೆ, ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ, ಆರ್.ಗಿರಿ ಛಾಯಾಗ್ರಹಣ, ಶ್ರೀನಿವಾಸ್ ಎಸ್ ಬಾಬು ಸಂಕಲನ, ಚಂದ್ರಶೇಖರ್ ಸುವರ್ಣ ಮುಲ್ಕಿ ಕಲಾ ನಿರ್ದೇಶನ, ಕಾಂತ ಪ್ರಸಾದನ ಹಾಗೂ ಭಾಷಾ ಅವರ ವಸ್ತ್ರವಿನ್ಯಾಸವಿರುವ ವೀರ ಕಂಬಳ ಫೆಬ್ರವರಿ 27ರಂದು ತೆರೆಗಾಣಲಿದೆ.

ಪೋಷಕರ ಅತಿಯಾದ ನಿರೀಕ್ಷೆಯಿಂದ ಮಕ್ಕಳಲ್ಲಿ ಖಿನ್ನತೆ

ಮಕ್ಕಳ ಮೇಲೆ ಭಾರ ಹೇರದೆ ಸಹಜವಾಗಿ ಕಲಿಯಲು ನೆರವಾಗಬೇಕು | ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್

• ಪ್ರಜೋದಯ ವರದಿ

ಹಾಸನ: ಯುವ ಜನರಿಗೆ ಪೋಷಕರ ಅತಿಯಾದ ನಿರೀಕ್ಷೆ ಕಾಡುತ್ತಿದೆ. ಪೋಷಕರು ನಮ್ಮ ಮಕ್ಕಳು ಫಸ್ಟ್ ರ್‍ಯಾಂಕ್ ಬರಬೇಕು, ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು ಎಂಬ ಮನೋಭಾವದಿಂದ ಮಕ್ಕಳ ಮೇಲೆ ಓದಲು ಹೆಚ್ಚು ಒತ್ತಡ ಹಾಕುತ್ತಿದ್ದಾರೆ. ಇದೊಂದು ರೀತಿಯಲ್ಲಿ ಮಕ್ಕಳು ಖಿನ್ನತೆಗೆ ಒಳಗಾಗಲು ಕಾರಣವಾಗುತ್ತಿದೆ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಅವರು ತಿಳಿಸಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಹಾಸನ ಇವರ ಸಹಯೋಗದಲ್ಲಿ ಸಂತ ಜೋಸೆಫ್‌ರ ಶಾಲೆಯಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಖಿನ್ನತೆಗೆ ಒಳಗಾಗುವ ಮಕ್ಕಳು ನಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳುವುದು, ದುಷ್ಚಟಗಳಿಗೆ ಒಳಗಾಗುವುದು ಕೆಲವರಲ್ಲಿ ಕಂಡು ಬರುತ್ತಿದೆ. ಪೋಷಕರು ತಮ್ಮ ನಿರೀಕ್ಷೆಯ ಭಾರವನ್ನು ಮಕ್ಕಳ ಮೇಲೆ ಹೇರದೆ ಸಹಜವಾಗಿ ಕಲಿಯಲು ಬಾಲ್ಯ ಅನುಭವಿಸಲು ನೆರವಾಗಬೇಕು ಎಂದರು.

ಹಿರಿಯ ಸಿವಲ್ ನ್ಯಾಯಾದೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ಹದಿಹರೆಯವು ಮಕ್ಕಳ ಜೀವನದ ಅತ್ಯಂತ ಪ್ರಮುಖ ಘಟ್ಟವಾಗಿದ್ದು, ದೈಹಿಕ, ಮಾನಸಿಕ, ಬೌದ್ಧಿಕ, ಭಾಷೆ ಮತ್ತು ಸಾಮಾಜಿಕ ಬೆಳವಣಿಗೆಗಳಾಗುತ್ತದೆ. ದೇಹದಲ್ಲಿ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಮಕ್ಕಳು ಯೌನಸ್ತರಾಗಿ ರೂಪುಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಸೂಕ್ತ ಪೋಷಣೆ, ಖಾಳಜಿ, ಆರೈಕೆ ದೊರೆಯಬೇಕು ಎಂದು ಹೇಳಿದರು.

ಹದಿಹರೆಯದಲ್ಲಿ ನಡೆಯುವ ನೈಸರ್ಗಿಕ ಬದಲಾವಣೆಗಳಿಂದ ಗಂಡು -ಹೆಣ್ಣು ಮಕ್ಕಳು ಆಕರ್ಷಣೆಗೆ ಒಳಗಾಗುತ್ತಾರೆ. ಇದನ್ನ ಪ್ರೀತಿ -ಪ್ರೇಮ ಎಂದು ಪರಿಭಾವಿಸಿ ಮೊಬೈಲ್ ನಲ್ಲಿ ಹರಟುವುದು, ಕಾಲಹರಣ ಮಾಡುವುದು ಶಾಲೆ ಬಿಟ್ಟು ತಿರುಗಲು ಕಾರಣವಾಗುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳ ಪ್ರಭಾವಗಳಿಂದ ಮಕ್ಕಳು ಬಹುಬೇಗನೆ ನಕಾರಾತ್ಮಕ ಅಂಶಗಳ ಅನುಕರಣೆ, ಆಲೋಚನೆಗಳಿಗೆ ಅಲ್ಲದೆ ಕೆಲವು ಚಟಗಳಿಗೆ ಒಳಗಾಗುವುದು ಜಾಸ್ತಿಯಾಗುತ್ತದೆ ಆದ್ದರಿಂದ ಯುವ ಜನತೆ ಭವಿಷ್ಯದಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ಕೆ.ಜಿ., ಸಂಪನ್ಮೂಲ ವ್ಯಕ್ತಿ ಕಾಂತರಾಜು ಪೆನ್ಷನ್ ಮೊಹಲ್ಲಾ ಠಾಣೆಯ ಆರಕ್ಷಕ ನಿರೀಕ್ಷಕ ಸ್ವಾಮಿನಾಥ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜಿನ್ನೇನಹಳ್ಳಿಯಲ್ಲಿ ಹಸುವಿಗೆ ಸೀಮಂತ ಸಂಭ್ರಮ

ಸೋಬಾನ ಪದ ಹಾಡುವ ಮೂಲಕ ವಿಶೇಷ ಮೆರುಗು ನೀಡಿದ ಮಹಿಳೆಯರು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಜಿನ್ನೇನಹಳ್ಳಿ ಗ್ರಾಮದಲ್ಲಿ ಶ್ರೀ ಕಾಲಭೈರವೇಶ್ವರ ಎಂಟರ್‌ಪ್ರೈಸಸ್ ಮತ್ತು ಗೋದ್ರೇಜ್ ಆಗ್ರೋವೆಟ್ ವತಿಯಿಂದ ಗರ್ಭಿಣಿ ಗೋಮಾತೆಗೆ ಗೌರವೋತ್ಸವ ಕಾರ್ಯಕ್ರಮದಡಿ ಹಲವಾರು ಜನರ ಸಮ್ಮುಖದಲ್ಲಿ ಹಸುವಿಗೆ ವಿಶೇಷವಾಗಿ ಸೀಮಂತ ಕಾರ್ಯ ಮಾಡಲಾಯಿತು.

ಜಿನ್ನೇನಹಳ್ಳಿ ಗೇಟ್ ಬಳಿಯಿರುವ ರೈತ ಕೇಶವಣ್ಣ ಎಂಬುವವರ ಎರಡು ಮಿಶ್ರತಳಿ ಸೀಮೆ ಹಸುಗಳ ಮೈತೊಳೆದು ಮೈಮೇಲೆ ಸೀರೆ ಹಾಕಿ ಹಣೆಗೆ ಅರಿಶಿನ ಕುಂಕುಮವಿಟ್ಟು ಕೊರಳಿಗೆ ಹೂವಿನ ಹಾರವನ್ನು ಹಾಕಿ ಸಿಂಗರಿಸಲಾಯಿತು.

ಬಳಿಕ ಟೇಬಲ್ ಮೇಲೆ ಫಲ-ಪುಷ್ಪಗಳು ಹಾಗೂ ವಿವಿಧ ಬಗೆಯ ಸಿಹಿ ತಿನಿಸುಗಳನ್ನು ಇರಿಸಿ ಸಿಂಗಾರಗೊಂಡಿರುವ ಗರ್ಭಿಣಿ ಹಸುಗಳನ್ನು ನಿಲ್ಲಿಸಿ ವಿಶೇಷ ಪೂಜೆ ಮಾಡುವ ಮೂಲಕ ಸೀಮಂತ ಕಾರ್ಯವನ್ನು ಅತ್ಯಂತ ವಿಜೃಂಭಣೆಯಿಂದ ಅತಿ ಸಂಭ್ರಮದಲ್ಲಿ ನೆರವೇರಿಸಲಾಯಿತು.

ಮಹಿಳೆಯರು ಹಸುಗಳ ಹಣೆಗೆ ಕುಂಕುಮ ಇಟ್ಟು ಅಕ್ಷತೆ ಹಾಕಿ ಹರಸಿದರು. ಹಿರಿಯ ತಾಯಂದಿರು ಸೋಬಾನ ಪದ ಹಾಡುವ ಮೂಲಕ ಸೀಮಂತ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಕಾಲಭೈರವೇಶ್ವರ ಟ್ರೇಡರ್ಸ್‌ನ ಮಾಲೀಕರಾದ ಜೆ.ಎಸ್.ಕಾರ್ತಿಕ್, ಜೆ.ಎಸ್. ಆಕರ್ಷ, ಗೋದ್ರೆಜ್ ಕಂಪನಿಯ ಸುನಿಲ್.ಬಿ.ವಿ., ಎನ್.ಶ್ರೀಕಂಠ, ಡಾ. ಕವಿತಾ, ಪ್ರಮುಖರಾದ ಸುದೀಪ್, ಪ್ರಶಾಂತ್, ಕೇಶವಣ್ಣ, ಮಂಜುನಾಥ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಎಸ್.ಎಸ್.ಎಲ್.ಸಿ ಪರೀಕ್ಷೆ: 78 ಕೇಂದ್ರಗಳು

• ಪ್ರಜೋದಯ ವರದಿ

ಹಾಸನ: 2026 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಜಿಲ್ಲೆಯಲ್ಲಿ 78 ಪರೀಕ್ಷಾ ಕೇಂದ್ರಗಳಲಿ ಮಾ.8 ರಿಂದ ಏ.2 ರ ವರೆಗೆ ನಡೆಯಲಿದ್ದು ವಿದ್ಯಾರ್ಥಿಗಳು ಒಂದು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಬರುವುದು, ವಿದ್ಯಾರ್ಥಿಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸುವುದು, ಪ್ರವೇಶ ಪತ್ರ ಮತ್ತು ಅಗತ್ಯ ಲೇಖನ ಸಾಮಾಗ್ರಿಗಳೊಂದಿಗೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಶೇಷಚೇತನ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ ಮತ್ತು ಅವಶ್ಯಕತೆ ಇರುವ/ಸೂಕ್ತ ದಾಖಲೆಗಳೊಂದಿಗೆ ಕೋರಿಕೆ ಮೇರೆಗೆ ಹೆಚ್ಚುವರಿ ಕಾಲಾವಾಕಾಶ ನೀಡಿದೆ.

ಸಹಾಯಕ ಬರಹಗಾರರ ಸೌಲಭ್ಯಕ್ಕೆ ಈಗಾಗಲೇ ಕೋರಿರುವವರು ಒಂದು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ವಿವರ ಸಲ್ಲಿಸುವುದು, ಪರೀಕ್ಷೆಯಲ್ಲಿ ಅವ್ಯವಹಾರ ನಡೆಸಿದಲ್ಲಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಪರೀಕ್ಷಾ ಕೊಠಡಿಗೆ ಪರೀಕ್ಷೆಗೆ ಸಂಬಂದಿಸದ ಯಾವುದೇ ಸಾಮಗ್ರಿಗಳನ್ನು ಒಯ್ಯುವಂತಿಲ್ಲ, ಪ್ರತಿ ಪರೀಕ್ಷೆ ಕೇಂದ್ರದಲ್ಲಿ ಪ್ರತೀ ಕೊಠಡಿಗೆ ಸಿ.ಸಿ ಟಿವಿ ಅಳವಡಿಸಿ, ವೈಬ್‌ಸೈಟ್ ವ್ಯವಸ್ಥೆ ಮಾಡಲಾಗಿರುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಇಂದು ಪರೀಕ್ಷಾ ಸಂಭ್ರಮ ಕಾರ್ಯಕ್ರಮ

• ಪ್ರಜೋದಯ ವರದಿ

ಹಾಸನ: 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಮಾ. 18 ರಿಂದ ಏ.02 ರವರೆಗೆ ನಡೆಯಲಿದ್ದು ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು, ಶಾಲಾ ಎಸ್.ಡಿ.ಎಂ.ಸಿ ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಸದಸ್ಯರು, ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಂಭ್ರಮ ಕಾರ್ಯಕ್ರಮ ಫೆ. 20 ರಂದು 3.ಗಂಟೆಗೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಆರ್.ಸಿ ರಸ್ತೆ ಹಾಸನ ಇಲ್ಲಿ ಜಿಲ್ಲಾಧಿಕಾರಿ ಲತಾಕುಮಾರಿ ಕೆ.ಎಸ್ ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಹಾಸನ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕೊಡುಗೆಗಳು ಆರ್ಥಿಕ ಅಭಿವೃದ್ಧಿಗೆ ಅಡ್ಡಿ: ಸುಪ್ರಿಂ ಕಿಡಿ

ಶ್ರೀಮಂತ- ಬಡವರ ನಡುವೆ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಉಚಿತವಾಗಿ ನೀಡುವುದು ತಪ್ಪು

• ಪ್ರಜೋದಯ ವರದಿ

ನವದೆಹಲಿ: ರಾಜಕೀಯದಲ್ಲಿ 'ಫ್ರೀಬೀಸ್' ಸಂಸ್ಕೃತಿ ಹೆಚ್ಚುತ್ತಿರುವುದನ್ನು ಖಂಡಿಸಿದ ಸುಪ್ರೀಂ ಕೋರ್ಟ್, ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುವ ಇಂತಹ ನೀತಿಗಳನ್ನು ಪುನರ್ವಿಮರ್ಶಿಸುವ ಸಮಯ ಬಂದಿದೆ ಎಂದು ಗುರುವಾರ ಹೇಳಿದೆ.

ಗ್ರಾಹಕರ ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಎಲ್ಲರಿಗೂ ಉಚಿತ ವಿದ್ಯುತ್ ಒದಗಿಸಲು ಮುಂದಾಗಿರುವ ತಮಿಳುನಾಡು ವಿದ್ಯುತ್ ವಿತರಣಾ ನಿಗಮ ಲಿಮಿಟೆಡ್‌ನ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಸುಪ್ರೀಂ ಪೀಠ, ರಾಜ್ಯಗಳು ಬಡವರನ್ನು ಬೆಂಬಲಿಸುವುದು ಅರ್ಥವಾಗುವಂತಹದ್ದು. ಆದರೆ ಶ್ರೀಮಂತ ಮತ್ತು ಬಡವರ ನಡುವೆ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಉಚಿತವಾಗಿ ನೀಡುವುದು ತಪ್ಪು ಎಂದು ಹೇಳಿದೆ.

ದೇಶದ ಹೆಚ್ಚಿನ ರಾಜ್ಯಗಳು ಆದಾಯ ಕೊರತೆಯನ್ನು ಎದುರಿಸುತ್ತಿದೆ. ಆದರೂ ಅವು ಅಭಿವೃದ್ಧಿಗೆ ಬದಲಾಗಿ ಉಚಿತ ಕೊಡುಗೆಗಳನ್ನು ನೀಡುತ್ತಿವೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರನ್ನೊಳಗೊಂಡ ಪೀಠ ಹೇಳಿದೆ.

ಈ ರೀತಿಯ ದೊಡ್ಡ ದೊಡ್ಡ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ ಮತ್ತು ರಾಜ್ಯ ಸರ್ಕಾರಗಳು ಎಲ್ಲರಿಗೂ ಉಚಿತ ಆಹಾರ, ಸೈಕಲ್‌ಗಳು, ವಿದ್ಯುತ್ ನೀಡುವ ಬದಲು ಉದ್ಯೋಗ ಒದಗಿಸುವ ಮಾರ್ಗಗಳನ್ನು ಹುಡುಕಬೇಕು ಎಂದು ಪೀಠವು ಸಲಹೆ ನೀಡಿದೆ.

ಆದಾಗ್ಯೂ, ಉಚಿತ ವಿದ್ಯುತ್ ಒದಗಿಸಲು ಪ್ರಸ್ತಾಪಿಸಿರುವ ಡಿಎಂಕೆ ಸರ್ಕಾರದ ನೇತೃತ್ವದ ವಿದ್ಯುತ್ ವಿತರಣಾ ಸಂಸ್ಥೆಯ ಮನವಿಯ ಮೇರೆಗೆ ಸುಪ್ರೀಂ ಕೋರ್ಟ್, ಈ ಸಂಬಂಧ ಕೇಂದ್ರ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದೆ.

ತಮಿಳುನಾಡು ವಿದ್ಯುತ್ ಸಂಸ್ಥೆಯು 2024 ರ ವಿದ್ಯುತ್ ತಿದ್ದುಪಡಿ ನಿಯಮವನ್ನು ಪ್ರಶ್ನಿಸಿದೆ.

ಭಾರತದಲ್ಲಿ ನಾವು ಯಾವ ರೀತಿಯ ಸಂಸ್ಕೃತಿಯನ್ನು ಬೆಳೆಸುತ್ತಿದ್ದೇವೆ? ವಿದ್ಯುತ್ ಶುಲ್ಕವನ್ನು ಪಾವತಿಸಲು ಅಸಮರ್ಥರಾಗಿರುವವರಿಗೆ ಕಲ್ಯಾಣ ಕ್ರಮದ ಭಾಗವಾಗಿ ನೀವು ವಿದ್ಯುತ್ ಒದಗಿಸಲು ಬಯಸುತ್ತೀರಿ ಎಂಬುದು ಅರ್ಥವಾಗುವಂತಹದ್ದೆ ಎಂದು ಪೀಠ ಹೇಳಿದೆ.

ರಾಜ್ಯಗಳು ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ಗಮನಹರಿಸಬೇಕು. ನೀವು ಬೆಳಿಗ್ಗೆಯಿಂದ ಸಂಜೆಯವರೆಗೆ ಉಚಿತ ಆಹಾರ, ಉಚಿತ ಸೈಕಲ್, ನಂತರ ಉಚಿತ ವಿದ್ಯುತ್ ನೀಡಲು ಪ್ರಾರಂಭಿಸಿದರೆ ಯಾರು ಕೆಲಸ ಮಾಡುತ್ತಾರೆ ಮತ್ತು ಜನರಲ್ಲಿ ಕೆಲಸ ಮಾಡುವ ಮನೋಭಾವ ಕಡಿಮೆಯಾಗುತ್ತದೆ ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು.

ಕಟ್ಟಿನಕೆರೆ ಮಾರುಕಟ್ಟೆ: ಒತ್ತುವರಿ ತೆರವು ಶ್ಲಾಘನೀಯ

• ಪ್ರಜೋದಯ ವರದಿ

ಹಾಸನ: ನಗರದ ಕಟ್ಟಿನಕೆರೆ ಮಾರುಕಟ್ಟೆ ಪ್ರದೇಶದಲ್ಲಿ ರಸ್ತೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಕುರಿತು ಬಂದಿದ್ದ ಸಾರ್ವಜನಿಕರ ದೂರಿನ ಮೇರೆಗೆ ಹಾಸನ ಜಿಲ್ಲಾಧಿಕಾರಿಗಳ ಆದೇಶದಂತೆ ಮಹಾನಗರ ಪಾಲಿಕೆ ವತಿಯಿಂದ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ್ದು ಪ್ರಶಂಸೆಗೆ ಪಾತ್ರವಾಗಿದೆ.

ಪಾಲಿಕೆ ನೀಡಿದ ಮಳಿಗೆಗಳ ನಿಗದಿತ ವಿಸ್ತೀರ್ಣವನ್ನು ಮೀರಿ ವ್ಯಾಪಾರಿಗಳು ರಸ್ತೆ ಜಾಗವನ್ನು ಅಕ್ರಮವಾಗಿ ಬಳಸಿಕೊಂಡಿದ್ದರಿಂದ ಪಾದಚಾರಿಗಳು ಹಾಗೂ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗುತ್ತಿತ್ತು. ವಿಶೇಷವಾಗಿ ಮಾರುಕಟ್ಟೆ ಪ್ರದೇಶದಲ್ಲಿ ಹೆಚ್ಚಿದ ಜನಸಂದಣಿ ಮತ್ತು ವಾಹನ ದಟ್ಟಣೆಯಿಂದ ಸಾರ್ವಜನಿಕರಿಗೆ ಭದ್ರತಾ ಸಮಸ್ಯೆಯೂ ಎದುರಾಗುತ್ತಿತ್ತು.

ಈ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯ ಇಂಜಿನಿಯರ್ ಕವಿತಾ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ಜರುಗಿತು. ಹಲವು ವಿರೋಧಗಳ ನಡುವೆಯೂ ಯಾವುದೇ ಒತ್ತಡಕ್ಕೂ ಮಣಿಯದೆ, ಸ್ವತಃ ಸ್ಥಳದಲ್ಲೇ ಹಾಜರಾಗಿ ಧೈರ್ಯ ಹಾಗೂ ಕರ್ತವ್ಯ ನಿಷ್ಠೆಯಿಂದ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದು ಪ್ರಶಂಸೆಗೆ ಪಾತ್ರವಾಗಿದೆ.

ಕಾರ್ಯಾಚರಣೆಯ ವೇಳೆ ಅಕ್ರಮವಾಗಿ ವಿಸ್ತರಿಸಲ್ಪಟ್ಟ ಮಳಿಗೆಗಳ ಭಾಗಗಳನ್ನು ತೆರವುಗೊಳಿಸಿ ರಸ್ತೆ ಜಾಗವನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಯಿತು. ಈ ಕ್ರಮದಿಂದ ಪಾದಚಾರಿಗಳಿಗೆ ಸುಗಮ ಸಂಚಾರ ವ್ಯವಸ್ಥೆ ಒದಗುವುದರ ಜೊತೆಗೆ ವಾಹನ ಸಂಚಾರಕ್ಕೂ ಅನುಕೂಲವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಜದಲ್ಲಿ ಕಾನೂನುಬಾಹಿರ ಅಕ್ರಮಗಳನ್ನು ತಡೆಗಟ್ಟುವಲ್ಲಿ ಅಧಿಕಾರಿಗಳ ದೃಢಸಂಕಲ್ಪ ಹಾಗೂ ಬದ್ಧತೆ ಅತ್ಯಗತ್ಯವಾಗಿದೆ. ಈ ಕಾರ್ಯಾಚರಣೆ ಜಿಲ್ಲೆಯ ಇತರೆ ಇಲಾಖೆಗಳಿಗೂ ಮಾದರಿಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇಂತಹ ಕ್ರಮಗಳನ್ನು ಮುಂದುವರಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು ಇಂತಹ ಕರ್ತವ್ಯನಿಷ್ಠ ಅಧಿಕಾರಿಗಳಿಗೆ ಮಾನಸಿಕ ಬೆಂಬಲ ನೀಡುವುದು ಅವಶ್ಯಕವಾಗಿದೆ. ಕವಿತಾ ಹಾಗೂ ಕಾರ್ಯಾ ಚರಣೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳಿಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಾವಿರ ವರ್ಷದಂಚಿನಲ್ಲಿ ಅರೆಮಾದನಹಳ್ಳಿ ವಿಶ್ವಕರ್ಮ ಮಠ

• ಪ್ರಜೋದಯ ವರದಿ

ಆಲೂರು: ಅರೆಮಾದನಹಳ್ಳಿ ವಿಶ್ವಬ್ರಾಹ್ಮಣ ಮಠದಲ್ಲಿ ಯತಿಗಳಿದ್ದು ಉತ್ತರಾಧಿಕಾರಿಗಳನ್ನು ಮಾಡಿಕೊಳ್ಳುತ್ತಿರುವುದು ದೇಶದಲ್ಲೆ ಪ್ರಪ್ರಥಮ ಎಂದು ಅರೆಮಾದನಹಳ್ಳಿ ವಿಶ್ವಬ್ರಾಹ್ಮಣ ಮಹಸಂಸ್ಥಾನ ಮಠಾಧೀಶರಾದ ಶಿವಸುಜ್ಞಾನ ತೀರ್ಥ ಮಹಾಸ್ವಾಮಿಗಳು ತಿಳಿಸಿದರು.

ಪಟ್ಟಣದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ವಿಶ್ವಕರ್ಮ ಸಮಾಜ ಮತ್ತು ತಾಲ್ಲೂಕು ವಿರಾಟ್ ವಿಶ್ವಕರ್ಮ ಯುವಕ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ, ವಿರಾಟ್ ವಿಶ್ವಕರ್ಮ ಯುವಕ ಸಂಘದ ಪದಗ್ರಹಣ ಸಮಾರಂಭ ಮತ್ತು ಫೆ. 26 ರಂದು ಅರೆಮಾದನಹಳ್ಳಿ ಮಹಾಸಂಸ್ಥಾನದಲ್ಲಿ ನಡೆಯುವ ಸಂನ್ಯಾಸ ದೀಕ್ಷೆ ಮತ್ತು ಶಿಷ್ಯ ಸ್ವೀಕಾರ ಸಮಾರಂಭದ ಪೂರ್ವಬಾವಿ ಸಭೆ ಸಾನಿದ್ಯ ವಹಿಸಿ ಮಾತನಾಡಿದರು.

999 ವರ್ಷಗಳ ಹಿಂದೆ ಅರೆಮಾದನಹಳ್ಳಿ ಜಗದ್ಗುರು ಸುಜ್ಞಾನಮೂರ್ತಿ ಮಹಾಸ್ವಾಮಿಗಳು ಅವತರಿಸಲ್ಪಟ್ಟವರು. ಆ ಸಂಸ್ಥಾನದಲ್ಲಿ ಫೆ.26 ರಂದು ಮಠದಲ್ಲಿ ಜರುಗಲಿರುವ ಸಂನ್ಯಾಸ ದೀಕ್ಷೆ ಮತ್ತು ಶಿಷ್ಯ ಸ್ವೀಕಾರ ಮಾಡುತ್ತಿರುವ ವಟು, ಈಗಾಗಲೆ ಮೈಸೂರಿನಲ್ಲಿ ಸಂಸ್ಕೃತ ವೇದಾದ್ಯಯನ ಪಡೆದು, ಇಂಜಿನಿಯರ್ ಪದವೀಧರರಾಗಿದ್ದು, ಋಷಿಕೇಶದಲ್ಲಿ ದಯಾನಂದ ಸರಸ್ವತಿಯವರ ದಾರ್ಶನದಲ್ಲಿ ವೇದಾಂತಧ್ಯಯನ ಮಾಡಿ ನುರಿತವರಾಗಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಸಮಾಜದ ಶಕ್ತಿ ತುಂಬಬೇಕು ಎಂದರು.

ಸಮಾಜ ಮತ್ತು ಮಠಗಳಿಗೆ ಅವಿನಾಭಾವ ಸಂಬಂಧವಿದ್ದು ಯುವಶಕ್ತಿ ಅತ್ಯಗತ್ಯವಾಗಿದೆ. ಸಂಘಟನೆ ಒಂದು ಕುಟುಂಬದಂತಿರಬೇಕು. ದ್ವೇಷವನ್ನು ಮರೆಯಬೇಕು, ಸ್ನೇಹವನ್ನು ಬೆಳೆಸಬೇಕು. ಯುವಕರು ಮನಸ್ಸು ಮಾಡಿದರೆ ಹಿರಿಯರ ಮಾರ್ಗದರ್ಶನದಲ್ಲಿ ಏನನ್ನಾದರೂ ಸಾಧನೆ ಮಾಡಬಹುದು. ಭಿನ್ನಾಭಿಪ್ರಾಯ ತೊರೆದು ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿ ಮಹಿಳಾ ಮಂಡಲಿಗಳು ಪ್ರಾರಂಭವಾಗುವ ಮೂಲಕ ಮಠದ ಸಂಪರ್ಕವಿಟ್ಟುಕೊಂಡು ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ಬೆಳೆಸಬೇಕು ಎಂದರು.

ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಚ್.ವಿ.ಹರೀಶ್, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ಮಾಜಿ ಅಧ್ಯಕ್ಷ ಬಿ.ಸಿ. ಶಂಕರಾಚಾರ್, ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಂ.ಪಿ.ಹರೀಶ್, ವಿರಾಟ್ ವಿಶ್ವಕರ್ಮ ಯುವಕ ಸಂಘದ ಅಧ್ಯಕ್ಷ ವೀರಭದ್ರಸ್ವಾಮಿ, ಉಪಾಧ್ಯಕ್ಷ ಎಂ.ಡಿ. ಪ್ರದೀಪ್, ಬಿ.ವೈ.ಮಧುಕುಮಾರ್, ವಿಶ್ವನಾಥ್, ಎಂ.ಡಿ.ಪ್ರತಾಪ್, ಪವನ್, ಎಂ.ಯು. ಮಿಥುನ್ ಇತರರಿದ್ದರು.

ಇಂದು ಸಂತಕವಿ ಸರ್ವಜ್ಞ ಜಯಂತಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಫೆ.20 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಸಂತಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಎಂ.ಶಿವಲಿಂಗೇಗೌಡ ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರಾದ ಹೆಚ್.ಡಿ ರೇವಣ್ಣ, ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ಭಾಗವಹಿಸಲಿದ್ದಾರೆ. ಹೆಬ್ಬಾಲೆ ಸರ್ಕಾರಿ ಪ.ಪೂ. ಕಾಲೇಜು ಮುಖ್ಯಶಿಕ್ಷಕ ಬಿ.ಡಿ. ಶಂಕರೇಗೌಡ ಉಪನ್ಯಾಸ ನೀಡಲಿದ್ದಾರೆ.

ಹಿಂದೂ ಸಮಾಜ ಕಟ್ಟಿ ಬೆಳೆಸುವ ಶಕ್ತಿ ಬಿಜೆಪಿಗೆ ಮಾತ್ರ

ತಾಲ್ಲೂಕಿನಲ್ಲಿ ಸದೃಢವಾಗಿ ಪಕ್ಷ ಕಟ್ಟಲು ಮುಂದಾಗಬೇಕು: ಚಿದಾನಂದ್

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಹಿಂದೂ ಸಮಾಜವನ್ನು ಸದೃಢವಾಗಿ ಕಟ್ಟಿ ಬೆಳೆಸುವ ಶಕ್ತಿ ಇರುವುದು ಹಾಗೂ ಹಿಂದೂ ಧರ್ಮವನ್ನು ಉಳಿಸಿ ಬೆಳೆಸುವ ಬದ್ಧತೆಯನ್ನು ಹೊಂದಿರುವುದು ಕೇವಲ ಬಿಜೆಪಿ ಪಕ್ಷಕ್ಕೆ ಮಾತ್ರ ಎಂದು ಬಿಜೆಪಿ ಮುಖಂಡ ಚಿದಾನಂದ್ ತಿಳಿಸಿದರು.

ಅವರು ತಾಲ್ಲೂಕಿನ ಕುಂದೂರಿನಲ್ಲಿ ನಡೆದ ರಾಮೋತ್ಸವದ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಬಾರಿ ರಾಮೋತ್ಸವವನ್ನು ತಾಲ್ಲೂಕಿನಲ್ಲಿ ಅದ್ದೂರಿಯಾಗಿ ನಡೆಸಲು ಸಹಕರಿಸಿದ ಕಾರ್ಯಕರ್ತರಿಗೆ ನಾವು ಸದಾ ಚಿರಋಣಿಯಾಗಿರುತ್ತೇವೆ. ಇದೇ ಪ್ರಥಮ ಬಾರಿಗೆ ತಾಲ್ಲೂಕಿನಲ್ಲಿ ಒಂದು ಅದ್ದೂರಿ ಹಿಂದೂ ಕಾರ್ಯಕ್ರಮವನ್ನು ಜರುಗಿಸಲು ಸಹಕರಿಸಿದ ತಾಲ್ಲೂಕಿನ ಜನತೆಗೆ ನಾವು ಸದಾ ಆಭಾರಿಯಾಗಿದ್ದು ಯಾವುದೇ ಗೊಂದಲಗಳಿಲ್ಲದೆ ನಮ್ಮ ಹಿಂದೂ ಕಾರ್ಯಕರ್ತರು ಶ್ರಮಪಟ್ಟು ಈ ಬಾರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಅವರೆಲ್ಲರಿಗೂ ಈ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸುವುದಾಗಿ ಅವರು ಹೇಳಿದರು.

ಇದೇ ರೀತಿ ಪ್ರತಿ ವರ್ಷವೂ ಕೂಡ ನಿಮ್ಮಗಳ ಸಹಕಾರದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಈ ಬಾರಿ ಬಿಗ್ ಬಾಸ್ ವಿನ್ನರ್ ನಟ ಗಿಲ್ಲಿ ಅವರನ್ನ ಕರೆಸಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿಸಿದ್ದೇವೆ. ಅದೇ ರೀತಿ ಪ್ರತಿವರ್ಷವೂ ಕೂಡ ಒಬ್ಬೊಬ್ಬ ಮುಖ್ಯ ಅತಿಥಿಗಳನ್ನು ಕರೆಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ತಾಲ್ಲೂಕಿನಲ್ಲಿ ಪಕ್ಷ ಸಂಘಟನೆ ಮಾಡುವುದು ನಮ್ಮಗಳ ಕರ್ತವ್ಯವಾಗಿದ್ದು, ಮುಂಬರುವ ಚುನಾವಣೆಯಲ್ಲಿ ಇದೇ ರೀತಿ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಗೆಲುವು ನಮ್ಮ ಬಿ.ಜೆ.ಪಿ. ಪಕ್ಷದ್ದೇ ಆಗುತ್ತದೆ ಆದ್ದರಿಂದ ತಾವೆಲ್ಲರೂ ಒಟ್ಟುಗೂಡಿ ತಾಲ್ಲೂಕಿನಲ್ಲಿ ಸದೃಢವಾಗಿ ಪಕ್ಷ ಕಟ್ಟಲು ಮುಂದಾಗಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರುಗಳಾದ ರೂಪೇಶ್, ಜಗದೀಶ್ ಕೆರೆ ಬೀದಿ, ಮಂಜು ಗುಂಡಶೆಟ್ಟಿಹಳ್ಳಿ, ಆನಂದ್, ಜಯರಾಮ್ ಮಾರೇನಹಳ್ಳಿ, ರಘು ರಾಜೇಗೌಡ, ಶಾಂತರಾಜ್, ಸಿದ್ಧಾರ್ಥ, ನವೀನ್ ಮತ್ತಿತರರಿದ್ದರು.

ರಕ್ತದಾನವು ಜೀವ ರಕ್ಷಿಸುವ ಪುಣ್ಯಕಾರ್ಯ

• ಪ್ರಜೋದಯ ವರದಿ

ಹಾಸನ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಹಾಸನ ಮತ್ತು ಕರ್ನಾಟಕ ಬ್ಯಾಂಕ್ ಹಾಸನ ಮುಖ್ಯ ಕಚೇರಿ ಇವರ ಸಂಯುಕ್ತ ಆಶ್ರಯದಲ್ಲಿ ಕುವೆಂಪು ನಗರ ಶಾಖೆಯಲ್ಲಿ ಕರ್ನಾಟಕ ಬ್ಯಾಂಕ್‌ನ 102ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಕರ್ನಾಟಕ ಬ್ಯಾಂಕ್ ನಿವೃತ್ತ ಮುಖ್ಯ ವ್ಯವಸ್ಥಾಪಕ ಹಾಗೂ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಹೆಚ್.ಡಿ.ಜಯೇಂದ್ರ ಕುಮಾರ್, ಮುಖ್ಯ ವ್ಯವಸ್ಥಾಪಕ ಉಮೇಶ್ ಭಟ್ ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್ ಮತ್ತು ನಿರ್ದೇಶಕರು ಚಾಲನೆ ನೀಡಿ, ರಕ್ತದಾನದ ಮಹತ್ವವನ್ನು ವಿವರಿಸಿದರು.

ಸಮಾಜ ಸೇವೆಯ ಅಂಗವಾಗಿ ರಕ್ತದಾನ ಮಾಡುವುದು ಜೀವ ರಕ್ಷಿಸುವ ಪುಣ್ಯ ಕಾರ್ಯವಾಗಿದ್ದು, ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಶಿಬಿರಗಳಲ್ಲಿ ಭಾಗವಹಿಸಬೇಕು ಎಂದು ಅವರು ಕರೆ ನೀಡಿದರು.

ಶಿಬಿರದಲ್ಲಿ ಒಟ್ಟು 25 ಮಂದಿ ಸ್ವಯಂ ಪ್ರೇರಿತ ರಕ್ತದಾನಿಗಳು ರಕ್ತದಾನ ಮಾಡಿದರು. ರಕ್ತದಾನಿಗಳಿಗೆ ರೆಡ್‌ಕ್ರಾಸ್ ಸಂಸ್ಥೆಯ ವತಿಯಿಂದ ಸ್ಮರಣಾರ್ಥವಾಗಿ ಕೀ-ಚೈನ್ ವಿತರಿಸಲಾಯಿತು.

ರೆಡ್‌ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹ್ಮದ್, ಅಮ್ಜಾದ್‌ಖಾನ್, ಹೆಚ್.ಡಿ. ಕುಮಾರ್, ಎಸ್.ಎಸ್. ಪಾಷಾ, ಉದಯಕುಮಾರ್, ಕೆ.ಟಿ.ಜಯಶ್ರೀ, ಜಯಪ್ರಕಾಶ್, ಗಿರೀಶ್, ಭೀಮರಾಜ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಾಮಾಜಿಕ ಯೋಗಕ್ಷೇಮದ ಮೇಲೆ ಹಾನಿಕಾರಕ ಪರಿಣಾಮ: ರಾಜೀವ್‌ಗಾಂಧಿ ಆರೋಗ್ಯ ವಿ.ವಿ. ಕುಲಪತಿ ಭಗವಾನ್

ಯುವಜನರಲ್ಲಿ ಮಾದಕ ವ್ಯಸನ ಅತ್ಯಂತ ಕಳವಳಕಾರಿ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಯುವ ಪೀಳಿಗೆಯಲ್ಲಿ ಮಾದಕ ವ್ಯಸನವು ಗಂಭೀರವಾದ ಕಳವಳಕಾರಿ ವಿಷಯವಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಬಿ.ಸಿ.ಭಗವಾನ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಸ್ಥ ಭಾರತ ಶ್ರೇಷ್ಠ ಭಾರತ ಕಾರ್ಯಕ್ರಮದ ಭಾಗವಾಗಿ ಮಾದಕ ವ್ಯಸನವು ಮಾದಕ ದ್ರವ್ಯಗಳನ್ನು ಬಳಸುವ ವ್ಯಕ್ತಿಗೆ ಮಾತ್ರ ಸೀಮಿತವಾ ಗಿಲ್ಲ. ಆದರೆ ಕುಟುಂಬಗಳು, ಸಮು ದಾಯಗಳು ಮತ್ತು ಒಟ್ಟಾರೆಯಾಗಿ ಸಮಾಜಕ್ಕೂ ವಿಸ್ತರಿಸುತ್ತವೆ ಎಂದರು.

ಮಾದಕ ದ್ರವ್ಯಗಳ ದುರುಪಯೋಗದ ಹೆಚ್ಚಳವು ಅಪರಾಧ ಹೆಚ್ಚಳಕ್ಕೆ ಕಾರಣವಾಗಿದೆ ಮತ್ತು ಸಾಮಾಜಿಕ ಯೋಗಕ್ಷೇಮದ ಮೇಲೆ ಒಟ್ಟಾರೆ ಹಾನಿಕಾರಕ ಪರಿಣಾಮವನ್ನು ಬೀರಿದೆ. ಮಾದಕ ವ್ಯಸನ ತಡೆಯಲು ಶಿಕ್ಷಣ ಸಂಸ್ಥೆಗಳಲ್ಲಿ ಜಾಗೃತಿ, ವಿದ್ಯಾರ್ಥಿಗಳಲ್ಲಿ ನಶೆ ಮುಕ್ತ ಜೀವನಶೈಲಿ ಉತ್ತೇಜನ ನೀಡುವ ಉದ್ದೇಶದಿಂದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಿಶಾ ಭೋದ್ ಫೌಂಡೇಶನ್, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಮತ್ತು ಜೀವನ ಸಾರ್ಥಕತೆ ಸಂಸ್ಥೆಗಳ ಸಹಯೋಗದೊಂದಿಗೆ ಯುವಜನರಲ್ಲಿ ಮಾದಕವಸ್ತು ವ್ಯಸನ ಮುಕ್ತಗೊಳಿಸಲು ಮತ್ತು ಅಂಗಾಂಗ ದಾನದ ಮಹತ್ವ ತಿಳಿಸಲು 'ನಶಾ ಮುಕ್ತ ಭಾರತ, ಕರ್ನಾಟಕ, ಕ್ಯಾಂಪಸ್ ಹಾಗೂ ಅಂಗಾಂಗ ದಾನ ಅಭಿಯಾನ'ಗಳನ್ನು ತೀವ್ರಗೊಳಿಸಲಾಗಿದೆ ಎಂದು ತಿಳಿಸಿದರು.

ಇದು ಆರೋಗ್ಯವಂತ ಸಮಾಜ ಮತ್ತು ಸುರಕ್ಷಿತ ಕ್ಯಾಂಪಸ್ ಪರಿಸರವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

ಕರ್ನಾಟಕದಾದ್ಯಂತ ಇರುವ ಶಾಲಾ, ಕಾಲೇಜು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ನಡೆಯಲಿರುವ ಮಹತ್ವದ ಜಾಗೃತಿ ಅಭಿಯಾನ ಮಾದಕ ದ್ರವ್ಯ ಬಳಕೆಯನ್ನು ತಡೆಗಟ್ಟಲು ಒಟ್ಟಾಗಿ ಹೋರಾಡಬೇಕಾದ ಅಗತ್ಯವಿದೆ ಎಂದು ಕರೆ ನೀಡಿದರು.

ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಗಳ ವ್ಯಾಪ್ತಿಯ 9 ಜಿಲ್ಲೆಗಳಲ್ಲಿ ಈಗಾಗಲೇ ಈ ಅಭಿಯಾನ ವನ್ನು ಆರಂಭಿಸಿದ್ದು, ಹಾಸನ ಜಿಲ್ಲೆ 10ನೇಯದಾಗಿದೆ. ಈಗಾಗಲೇ ಸುಮಾರು 45 ಸಾವಿರ ವಿದ್ಯಾರ್ಥಿಗಳನ್ನು ತಲುಪಿದ್ದು, ಫೆ.27 ಮತ್ತು ಫೆ.28 ರಂದು ವಿಜಯಪುರ, ಬೆಳಗಾಂ, ರಾಯಚೂರು ಜಿಲ್ಲೆಗಳಲ್ಲೂ ಅಭಿಯಾನ ನಡೆಸಲಾಗುವುದು ಎಂದರು.

ಇನ್ನೆರಡು ತಿಂಗಳಲ್ಲಿ ಎಲ್ಲ ಜಿಲ್ಲೆಗಳಲ್ಲೂ ಕಾರ್‍ಯಕ್ರಮ ರೂಪಿಸಿ ನಮ್ಮ ಆರೋಗ್ಯ ದೇಶದ ಆರೋಗ್ಯ ಎಂಬ ಸಂದೇಶ ಸಾರಲಾಗುವುದು. ಇಂತಹ ಅಭಿಯಾನಗಳಿಂದ ಮಾದಕ ದ್ರವ್ಯ ವಿರುದ್ಧದ ಹೋರಾಟ ಗಳನ್ನು ಮತ್ತಷ್ಟು ಶಕ್ತಿಯುತಗೊಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ಜನಸಾಮಾನ್ಯರು ಅದರಲ್ಲೂ ಯುವಪೀಳಿಗೆ ಹೆಚ್ಚು ಗಮನ ಹರಿಸಬೇಕಿದೆ. ಇಂತಹ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಿದೆ. ಮಾದಕ ದ್ರವ್ಯವು ಬಳಕೆದಾರರಿಗೆ ಮಾತ್ರವಲ್ಲ ಅವರ ಕುಟುಂಬಗಳಿಗೆ ಮತ್ತು ಸಮಾಜಕ್ಕೂ ಮಾರಕವಾಗಿದೆ ಎಂಬ ಸಂದೇಶ ಎಲ್ಲರನ್ನೂ ತಲುಪಬೇಕಿದೆ ಎಂದು ಎಚ್ಚರಿಸಿದರು.

ಡ್ರಗ್ಸ್ ಚಟಕ್ಕೆ ದಾಸರಾದವರ ಮಾಹಿತಿಯನ್ನು ಮುಚ್ಚಿಡುತ್ತಿರುವುದರಿಂದ ಬೇಗನೆ ಮಾಹಿತಿ ದೊರೆಯದಂತಾಗಿದೆ. ರಾಜ್ಯದಲ್ಲಿ ಕಳೆದೆರಡು ವರ್ಷದಲ್ಲಿ ಶೇ.63ರಷ್ಟು ಹೆಚ್ಚಾಗಿದ್ದು, ನಮ್ಮ ವಿ.ವಿ. ವ್ಯಾಪ್ತಿಯಲ್ಲಿ ಬೆರಳೆಣಿಕೆಯಷ್ಟು ಪ್ರಕರಣಗಳು ಪತ್ತೆಯಾಗಿವೆ. ವಿದ್ಯಾರ್ಥಿ ಪ್ರತಿನಿಧಿ, ಪೊಲೀಸ್ ಹಾಗೂ ಶಿಕ್ಷಕರನ್ನೊಳಗೊಂಡ ಡ್ರಗ್ಸ್ ನಿಯಂತ್ರಣ ತಂಡವನ್ನು ಪ್ರತಿ ಕಾಲೇಜಿನಲ್ಲೂ ರಚಿಸಿದ್ದು, ನಾರ್ಕೋಟಿಕ್ ನಿಯಂತ್ರಣ ಬ್ಯೂರೋದೊಂದಿಗೆ ಒಡಂಬಡಿಕೆಯನ್ನೂ ಮಾಡಿಕೊಳ್ಳಲಾಗಿದೆ. ಈ ತಂಡದ ವರದಿಯನ್ನಾಧರಿಸಿ ಕಾಲೇಜುಗಳ ನೋಂದಣಿಯ ನವೀಕರಣ ಮಾಡಲಾಗುವುದು ಎಂದು ಅವರು ತಿಳಿಸಿದರು.

ಶ್ರೇಷ್ಠ ದಾನಗಳಲ್ಲಿ ಅಂಗಾಂಗ ದಾನವು ಕೂಡ ಒಂದು. ಆದರೆ ಈ ಬಗ್ಗೆ ಜನರಿಗೆ ಅಷ್ಟಾಗಿ ಮಾಹಿತಿ ಇಲ್ಲ, ಅದಕ್ಕಾಗಿಯೇ ಅಂಗಾಂಗ ದಾನ ಮಾಡುವವರ ಸಂಖ್ಯೆ ಕೂಡ ಕಡಿಮೆ. ಈ ಬಗ್ಗೆ ಅರಿವಿನ ಕೊರತೆ ಹೆಚ್ಚಿದೆ. ಯಾರೂ ಬೇಕಾದರೂ ಅಂಗಾಂಗ ದಾನ ಮಾಡಬಹುದು. ಆದರೆ ಅದಕ್ಕಿರುವ ಸೂಕ್ತ ವಿಧಾನ ಅನುಸರಿಸಬೇಕು ಎಂದು ಸಲಹೆ ನೀಡಿದರು.

ಸಿಂಡಿಕೇಟ್ ಸದಸ್ಯರಾದ ಡಾ.ಎಸ್.ಎ.ನಿತಿನ್, ಡಾ.ರಾಮಚಂದ್ರ ಪ್ರಭು, ಡಾ. ಮಧುಸೂದನ್, ಡಾ.ಓಬಳ ರೆಡ್ಡಿ, ನವೋದಯ ವಿದ್ಯಾಸಂಗದ ಅಧ್ಯಕ್ಷ ಸಿ.ಜೆ.ಮಂಜುನಾಥ್, ಕಾರ್ಯದರ್ಶಿ ಕೆ.ಪಿ.ಶರತ್ ಹಾಗೂ ಸಂಘದ

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175-273229 email: tstaff_ulb_holenarasipur@yahoo.co.in

ನಂ:ಪುಸ.ಹೊನಪು/ಸಿಬ್ಬಂದಿ/ಪಿ.ಆರ್01/2025-26

ದಿನಾಂಕ: 18.02.2026

"ವಾರ್ಷಿಕ ಟೆಂಡರ್ ಪ್ರಕಟಣೆ" (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಪುರಸಭಾ ನಿಧಿಯಡಿ ಈ ಕೆಳಕಂಡ ಸೇವೆಯನ್ನು ನೊಂದಾಯಿತ ಅರ್ಹ ಗುತ್ತಿಗೆದಾರರು/ಏಜೆನ್ಸಿಗಳಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜೆನ್ಸಿಗಳವರು ಭಾಗವಹಿಸಬಹುದಾಗಿರುತ್ತದೆ. ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರ ಪುರಸಭೆಯು ಹೊಂದಿರುತ್ತದೆ. ಇ-ಪ್ರಕ್ಯೂರ್‌ಮೆಂಟ್ https://kppp.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಕ್ರ.ಸಂ.ಯೋಜನೆ ವಿವರ: 1)ಹೊಳೆನರಸೀಪುರ ಪುರಸಭಾ ಕಛೇರಿ ಕೆಲಸ ಕಾರ್ಯಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ 2 (ಇಬ್ಬರು) ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು Indent No: DMA/2025-26/SE7215 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)5.98 ಇಎಂಡಿ ಮೊತ್ತ (ರೂ.ಗಳಲ್ಲಿ)15000-00 ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 05.03.2026 ಸಂಜೆ 5.00 ಗಂಟೆಗೆ ಸ್ವೀಕರಿಸಲಾದ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 07.03.2026 ಬೆಳಿಗ್ಗೆ: 11.00 ಗಂಟೆಗೆ

ಸಹಿ/-ಮುಖ್ಯಾಧಿಕಾರಿ,
ಪುರಸಭೆ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/1090/ಕೆಎಸ್ಎಂಸಿಎ/2025-26

ಅಪಘಾತದಲ್ಲಿ ಬೈಕ್, ಸ್ಕೂಟರ್ ಸವಾರರ ಸಾವು

• ಪ್ರಜೋದಯ ವರದಿ

ಹಾಸನ: ಬೈಕ್ ಹಾಗು ಸ್ಕೂಟರ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಇಬ್ಬರೂ ಸವಾರರು ಮೃತ ಪಟ್ಟಿರುವ ಘಟನೆ ತಣ್ಣೀರುಹಳ್ಳ ಸಮೀಪದ ಗುಡ್ಡೇನಹಳ್ಳಿ ಶ್ರೀದೇವಿ ಪೆಟ್ರೋಲ್ ಬಂಕ್ ಬಳಿ ಬುಧವಾರ ನಡೆದಿದೆ.

ಗುಡ್ಡೇನಹಳ್ಳಿ ಗ್ರಾಮದ ರಾಕೇಶ್ ಹಾಗು ಮತ್ತೊಬ್ಬರು ಮೃತಪಟ್ಟಿದ್ದಾರೆ. ರಾತ್ರಿ 11.30ರ ಸಮಯದಲ್ಲಿ ರಾಕೇಶ್ ಹಾಸನ ನಗರದಿಂದ ಮನೆಗೆ ಹೋಗುತ್ತಿದ್ದಾಗ ಬೇಲೂರು ಕಡೆ ಯಿಂದ ವೇಗವಾಗಿ ಬಂದ ಸ್ಕೂಟರ್ ಸವಾರ ಡಿಕ್ಕಿ ಮಾಡಿದ್ದಾನೆ. ಅಪ ಘಾತದ ರಭಸಕ್ಕೆ ಇಬ್ಬರೂ ಕೆಳಗೆ ಬಿದ್ದಿದ್ದು, ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸುವಾಗ ರಾಕೇಶ್ ಮಾರ್ಗ ಮಧ್ಯೆ ಮೃತ ಪಟ್ಟರೆ ಸ್ಕೂಟರ್ ಸವಾರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರ ಮರಳಿ ಪಡೆಯುವ ಸಂಕಲ್ಪ

» **ಮೊದಲನೇ ಪುಟದಿಂದ**

ಸಣ್ಣಪುಟ್ಟ ಭಿನ್ನಾಭಿಪ್ರಾಯ ಮರೆತು ಒಟ್ಟಾಗಿ ಕೆಲಸ ಮಾಡಿದರೆ 2028ಕ್ಕೆ ಬಿಜೆಪಿ ಗತವೈಭವ ಮರುಕಳಿಸಲಿದೆ ಎಂದು ಹೇಳಿದರು.

ಸರ್ಕಾರದ ವಿರುದ್ಧ ಜನಾಕ್ರೋಶ ವಿದ್ದು, ನಾವು ಒಟ್ಟಾಗಿ ಈ ಸರ್ಕಾರಕ್ಕೆ ಚಳಿ ಬಿಡಿಸಿದ್ದೇವೆ, ಮುಂದಿನ ಆರೇಳು ತಿಂಗಳು ಚುನಾವಣಾ ಪರ್ವ ಸರಣಿ ಆರಂಭವಾಗಲಿದೆ. ಚುನಾವಣೆಗಳಲ್ಲಿ ಒಂದಾಗಿ ಒಂದು ದನಿಯಾಗಿ ಕೆಲಸ ಮಾಡೋಣ. ರಾಜ್ಯದ ಜನರು ಈ ಸರ್ಕಾರದ ಮೇಲೆ ಸಂಪೂರ್ಣ ವಿಶ್ವಾಸ ಕಳೆದುಕೊಂಡಿದ್ದಾರೆ. ಎಲ್ಲಾ ವರ್ಗದ ಜನರು ಸಂಕಷ್ಟದಲ್ಲಿದ್ದಾರೆ. 2 ಲಕ್ಷ 85 ಸಾವಿರ ಉದ್ಯೋಗಗಳು ಖಾಲಿ ಇದ್ದರೂ, ನೇಮಕಾತಿ ಮಾಡಿಲ್ಲ, ಜನ ವಿರೋಧಿ, ಬಡವರ ವಿರೋಧಿ, ಮಹಿಳೆ ಯರ ವಿರೋಧ ರಾಜ್ಯದಲ್ಲಿ ಅರಾಜಕತೆ ಸೃಷ್ಟಿ ಮಾಡುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರೇ ಈ ಸರ್ಕಾರದ ವಿರುದ್ಧ ದಂಗೆ ಎದ್ದಿರುವ ಪರಿಸ್ಥಿತಿ ಬಂದಿದೆ. ಅನು ದಾನ ಕೊಡಲು ಆಗುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಶಾಸಕರನ್ನು ವಿದೇಶಕ್ಕೆ ಕಳುಹಿಸಿ ಕೊಟ್ಟು ಸಮಾಧಾನ ಮಾಡುತ್ತಿದ್ದಾರೆ ಎಂದರು.

ಈ ಸರ್ಕಾರದಿಂದ ಸಮುದಾಯಗ ಳಿಗೆ ನ್ಯಾಯ ಕೊಡಲು ಆಗಿಲ್ಲ. ಅಹಿಂದ ಹೆಸರು ಹೇಳಿಕೊಂಡು ಅಧಿ ಕಾರ ಹಿಡಿದಿರುವ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಳ್ಳ ಹಿಡಿದಿದೆ. ಅಹಿಂದ ಹೆಸರಲ್ಲಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿ ದ್ದಾರೆ. ಹಿಂದುಳಿದ ವರ್ಗಗಳು, ದಲಿತ ಸಮುದಾಯಗಳನ್ನು ಕಾಂಗ್ರೆಸ್ ಕೇವಲ ವೋಟ್ ಬ್ಯಾಂಕ್ ಮಾಡಿ ಕೊಂಡಿದೆ ಎಂದು ಆರೋಪಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇದ್ದರು.

ಜಾಗತಿಕ ಆಹಾರ ಭದ್ರತೆ: ವಿಶ್ವಸಂಸ್ಥೆ ಜೊತೆ ಭಾರತ ಒಡಂಬಡಿಕೆ

5 ವರ್ಷಗಳ ಅವಧಿಗೆ 2 ಲಕ್ಷ ಟನ್ ಅಕ್ಕಿ ಪೂರೈಕೆ | ಸಚಿವ ಪ್ರಲ್ಹಾದ್ ಜೋಶಿ ಮಾಹಿತಿ

• ಪ್ರಜೋದಯ ವರದಿ

ನವದೆಹಲಿ: ಜಾಗತಿಕ ಆಹಾರ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಭಾರತ ಬದ್ಧತೆ ಪ್ರದರ್ಶಿ ಸುತ್ತಿದ್ದು, ಇದೀಗ ಐದು ವರ್ಷಗಳ ಕಾಲ ಅಕ್ಕಿ ಪೂರೈಕೆಗೆ ವಿಶ್ವಸಂಸ್ಥೆ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆಯೆಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಹೇಳಿದ್ದಾರೆ.

ಜಾಗತಿಕವಾಗಿ ಹಸಿವು ನೀಗಿಸುವ ಗುರಿಯೊಂದಿಗೆ ಹೆಜ್ಜೆ ಹಾಕಿರುವ ಭಾರತ, ಮಾನವೀಯತೆ ತೋರುವ ಜೊತೆಗೆ ಆಹಾರ ಪೂರೈಕೆಯಲ್ಲಿ ವಿಶ್ವಕ್ಕೆ ಬೆಂಬಲವಾಗಿ ನಿಂತಿದೆ. ಅದಕ್ಕೆ ಸಾಕ್ಷಿ ಎನ್ನುವಂತೆ ಅಕ್ಕಿ ಪೂರೈಕೆಗಾಗಿ ಫೆ.18 ರಂದು ಭಾರತೀಯ ಆಹಾರ ನಿಗಮದ ವಿಶ್ವ ಆಹಾರ ಕಾರ್ಯಕ್ರಮ ತಿಳವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದಿದ್ದಾರೆ.

ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಕಾರ್ಯದರ್ಶಿ ಸಮ್ಮುಖದಲ್ಲಿ ರವೀಂದ್ರ ಕುಮಾರ್ ಅಗರ್ವಾಲ್ ಮತ್ತು ಉಪ ಕಾರ್ಯ ನಿರ್ವಾಹಕ ನಿರ್ದೇಶಕ ಕಾರ್ಲ್ ಸ್ಕೌ ಅವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

2 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಪೂರೈಕೆ

ಒಪ್ಪಂದದ ಪ್ರಕಾರ 2 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು (ಶೇ.25ರ ವರೆಗೆ) ಪೂರೈಸುತ್ತದೆ. ಈ ಒಪ್ಪಂದ ಇದೇ 2026ರ ಫೆ.18 ರಿಂದ ಐದು ವರ್ಷಗಳ ಅವಧಿಗೆ ಮಾನ್ಯವಾಗಿರು ತ್ತದೆ. ಅಲ್ಲದೆ, ಭವಿಷ್ಯದಲ್ಲಿ ಪರಸ್ಪರ ಒಪ್ಪಿಗೆ ಮೂಲಕ ವಿಸ್ತರಿಸಲೂಬಹುದು ಎಂದು ಪ್ರಲ್ಹಾದ ಜೋಶಿ ಸ್ಪಷ್ಟಪಡಿ ಸಿದ್ದಾರೆ.

ಅಕ್ಕಿ ಬೆಲೆಯನ್ನು ವಾರ್ಷಿಕ ಆಧಾ ರದ ಮೇಲೆ ಪರಸ್ಪರ ಒಪ್ಪಿಕೊಳ್ಳಲಾ ಗುತ್ತದೆ. ಪ್ರಸ್ತುತ ಬೆಲೆ ಕ್ವಿಂಟಾಲ್‌ಗೆ 2,800 ರೂ. ಆಗಿದ್ದು, ಮಾ.31ರ ವರೆಗೆ ಮಾತ್ರ ಈ ಬೆಲೆ ನಿಗದಿಪಡಿ ಸಿರುತ್ತದೆ ಎಂದಿದ್ದಾರೆ.

ಜಾಗತಿಕವಾಗಿ ಅಪೌಷ್ಟಿಕತೆ ಮತ್ತು ಆಹಾರ ಅಭದ್ರತೆ ಎದುರಿಸುವಲ್ಲಿ ಭಾರತ ಅಂತರ ರಾಷ್ಟ್ರೀಯ ಸಮುದಾ ಯದೊಂದಿಗೆ ನಿಲ್ಲುವುದನ್ನು ಮುಂದುವರಿಸುತ್ತದೆ. ಭಾರತದ ಈ ಬೆಂಬಲ ಮುಂದಿನ ಐದು ವರ್ಷ ಗಳಲ್ಲಿ ಪೌಷ್ಟಿಕ ಆಹಾರದೊಂದಿಗೆ ದುರ್ಬಲರನ್ನು ಹೆಚ್ಚು ಪರಿಣಾಮ ಕಾರಿಯಾಗಿ ತಲುಪಲು ಸಹಾಯ ಮಾಡುತ್ತದೆಂದು ಹೇಳಿದ್ದಾರೆ.

ಅಕ್ಕಿ ಪೂರೈಕೆ ಒಪ್ಪಂದಕ್ಕೆ ಸಹಿ ಹಾಕುವ ವೇಳೆ ವಿಶ್ವ ಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಉಪ ಕಾರ್ಯನಿರ್ವಾಹಕ ನಿರ್ದೇಶಕ ಕಾರ್ಲ್ ಸ್ಕೌ ಅವರು, ಭಾರತದೊಂದಿ ಗಿನ ಈ ಒಪ್ಪಂದವು ಜಾಗತಿಕ ಹಸಿವಿನ ವಿರುದ್ಧ ಹೋರಾಡುವಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಎಂದಿದ್ದಾರೆ.

ಕೃಷಿ ಪ್ರಧಾನ ರಾಷ್ಟ್ರ ಮತ್ತು ಜಾಗತಿಕ ಒಗ್ಗಟ್ಟಿನ ಪ್ರತಿಪಾದಕವಾ ಗಿರುವ ಭಾರತ, ಜಾಗತಿಕ ಶೂನ್ಯ ಹಸಿವು ನೀಗಿಸುವ ಗುರಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸ್ಫೂರ್ತಿ ನೀಡುತ್ತದೆ. ಈ ಪರಿವರ್ತನಾತ್ಮಕ ಪಾಲುದಾರಿಕೆಗಾಗಿ ಭಾರತಕ್ಕೆ ಧನ್ಯ ವಾದ ಹೇಳಿದ್ದಾರೆ. ವಿಶ್ವಸಂಸ್ಥೆ ಜೊತೆ ಗಿನ ಈ ಪಾಲುದಾರಿಕೆ ಜಾಗತಿಕ ಆಹಾರ ಭದ್ರತೆಗೆ ಭಾರತದ ಬದ್ಧತೆ ಯನ್ನು ಬಲಪಡಿಸುತ್ತದೆ. ವಿಶ್ವದಾ ದ್ಯಂತ ಮಾನವೀಯ ಅಗತ್ಯತೆಗಳನ್ನು ಪೂರೈಸುವಲ್ಲಿ ವಿಶ್ವ ಆಹಾರ ಕಾರ್ಯ ಕ್ರಮದೊಂದಿಗೆ ಸಹಕಾರ ಬಲಪಡಿಸು ತ್ತದೆಂದು ಜೋಶಿ ಪ್ರತಿಪಾದಿಸಿದ್ದಾರೆ.

ದಕ್ಷಿಣ ಶಾಂತಿ ಗುರುಧಾಮ್ ಪುಣ್ಯಕ್ಷೇತ್ರವಾಗಲಿ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಜಾಜೂರು ಗ್ರಾಮದಲ್ಲಿ ನಿರ್ಮಾಣವಾಗಿರುವ ದಕ್ಷಿಣ ಶಾಂತಿ ಗುರುಧಾಮ್ ಭವಿಷ್ಯ ದಲ್ಲಿ ದಕ್ಷಿಣ ಭಾರತದ ಪುಣ್ಯಕ್ಷೇತ್ರವಾಗಿ ವಿಶ್ವಪ್ರಸಿದ್ಧಿಯಾಗಲಿದೆ ಎಂದು ಮೂಡುಬಿದಿರೆಯ ದಿಗಂಬರ ಜೈನಮಠ ಜಗದ್ಗುರು ಡಾ.ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತ ಚಾರ್ಯ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ಹೇಳಿದರು.

ಜಾಜೂರು ಗ್ರಾಮದಲ್ಲಿರುವ ದಕ್ಷಿಣ ಶಾಂತಿ ಗುರುಧಾಮ್ ಕ್ಷೇತ್ರದಲ್ಲಿ ಟ್ರಸ್ಟ್ ವತಿಯಿಂದ ಶ್ರೀ ಯೋಗಿರಾಜ್ ವಿಜಯಶಾಂತಿ ಸೂರಿ, ಶ್ರೀ ಪದ್ಮಾವತಿ ದೇವಿ ಹಾಗು ಸರಸ್ವತಿ ದೇವಿಯವರ ಪ್ರತಿಷ್ಠಾಪನೆ ನಿಮಿತ್ತ ನಡೆಯಲಿರುವ ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಅವರು, ಯೋಗಿರಾಜ್ ಶ್ರೀ ವಿಜಯಶಾಂತಿ ಸೂರಿ ನೆಲೆಸಿರುವ ಈ ಧರ್ಮಕ್ಷೇತ್ರವು ಶಾಂತಿಯ ತಾಣವಾಗಿದ್ದು, ಸನಾತನ ಧರ್ಮದ ಅಡಿಯಲ್ಲಿ ಜೈನ ಧರ್ಮದ ಶ್ವೇತಾಂಬರ ಹಾಗು ದಿಗಂಬರ ಪರಂಪರೆಗಳು ಒಂದೇ ತತ್ವವನ್ನು ಸಾರುತ್ತಿವೆಂದು ತಿಳಿಸಿದರು.

ರಾಷ್ಟ್ರೀಯ ಹಾಗು ರಾಜ್ಯ ಮಟ್ಟ ದಲ್ಲಿ ಭಕ್ತರ ಪ್ರೀತಿಗೆ ಪಾತ್ರವಾದ ಶ್ರೀ ಕೋಡಿಮಠವು ತನ್ನದೇ ಆದ ಪ್ರಭಾ ವದಿಂದ ವಿವಿಧ ಧರ್ಮ-ಸಮುದಾಯ ಗಳಿಗೆ ಆಶ್ರಯ ನೀಡುತ್ತ ಬಂದಿದೆ. ಅದರ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ಈ ಧಾರ್ಮಿಕ ಕಾರ್ಯ ಕ್ರಮಗಳಿಗೆ ದಿವ್ಯ ಸಾನಿಧ್ಯ ವಹಿಸಿರು ವುದು ಸಂತೋಷಕರ ಎಂದರು.

ಕೋಡಿಮಠ ಮಹಾಸಂಸ್ಥಾನದ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ಮಾತನಾಡಿ ದರು. ತಿಪಟೂರು ಶಾಸಕ ಷಡಾಕ್ಷರಿ, ಯೋಗಿರಾಜ್ ಶ್ರೀ ವಿಜಯ್ ಶಾಂತಿ ಗುರು ಟ್ರಸ್ಟ್ ಅಧ್ಯಕ್ಷ ಸುರೇಶ್ ಮೆಹ್ತಾ, ವಿಜಯ್ ಸುರಾನ, ಮಾಂಗಿಲಾಲ್ ಮೆಹ್ತಾ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಸ್ಥಳೀಯ ಯೋಜನಾ ಪ್ರಾಧಿಕಾರ ಅಧ್ಯಕ್ಷ ಬಿ.ಎಸ್. ಅರುಣ್ ಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಉಪಸ್ಥಿತರಿದ್ದರು.

ಖುಷಿ ರಾಷ್ಟ್ರಮಟ್ಟದ ವಾಲಿಬಾಲ್ ಟೂರ್ನಿಗೆ ಆಯ್ಕೆ

• ಪ್ರಜೋದಯ ವರದಿ

ಹಾಸನ: ರಾಷ್ಟ್ರಮಟ್ಟದ ಸಬ್ ಜೂನಿಯರ್ ವಾಲಿಬಾಲ್ ಟೂರ್ನಿಗೆ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಆರ್.ಖುಷಿ ಆಯ್ಕೆಯಾಗಿದ್ದಾಳೆ.

ಫೆ.24 ರಿಂದ ಮಾರ್ಚ್ 1ರ ವರೆಗೆ ಪಶ್ಚಿಮ ಬಂಗಾಳದಲ್ಲಿ ನಡೆಯ ಲಿರುವ ರಾಷ್ಟ್ರೀಯ ಮಟ್ಟದ ಸಬ್ ಜೂನಿಯರ್ ವಾಲಿಬಾಲ್ ಟೂರ್ನಿಗೆ ಕರ್ನಾಟಕ ತಂಡವನ್ನು ಪ್ರತಿನಿಧಿಸುತ್ತಿ ದ್ದಾಳೆ. ರಾಷ್ಟ್ರೀಯ ಮಟ್ಟದ ಗೇಮ್ಸ್‌ನಲ್ಲಿ ಆಟವಾಡಲು ತೆರಳುತ್ತಿರುವ ವಿದ್ಯಾರ್ಥಿನಿ ಖುಷಿಗೆ ಶಾಲಾ ಆಡಳಿತ ಮಂಡಳಿ, ಪೋಷಕರು ಶುಭ ಹಾರೈಸಿದ್ದಾರೆ.

ಜಿಲ್ಲಾ ಸರ್ಕಾರಿ ಕ್ರೀಡಾ ಹಾಸ್ಟಲ್‌ನ ತರಬೇತು ದಾರ ರಮೇಶ್ ಅವರಿಂದ ಉತ್ತಮ ತರಬೇತಿ ಪಡೆಯುತ್ತಿ ರುವ ಖುಷಿ, ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀ ಸಾವೆಯ ರವಿ ಹಾಗು ಮಮತ ಅವರ ಪುತ್ರಿಯಾ ಗಿದ್ದಾಳೆ. ಈಕೆ ಹಿಂದೆಯೂ ರಾಜ್ಯ ಹಾಗು ರಾಷ್ಟ್ರ ಮಟ್ಟದ ಹಲವು ಟೂರ್ನಿಗಳಲ್ಲಿ ಪ್ರತಿನಿಧಿಸಿ ಗಮನ ಸೆಳೆದಿದ್ದಾರೆ.

ಗರ್ಭ ಕೊರಳ ಕ್ಯಾನ್ಸರ್ ತಡೆಗೆ ವ್ಯಾಕ್ಸಿನ್ ಪಡೆಯಿರಿ

• ಪ್ರಜೋದಯ ವರದಿ

ಬೇಲೂರು: ಇತ್ತೀಚಿನ ದಿನಗಳಲ್ಲಿ ಮಹಿಳೆ ಯರಲ್ಲಿ ಸ್ತನ ಹಾಗು ಗರ್ಭ ಕೊರಳ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿ ಕೊಳ್ಳುತ್ತಿದ್ದು ಸ್ತ್ರೀಯರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ ವೈದ್ಯರ ಸಲಹೆ ಪಡೆಯ ಬೇಕೆಂದು ಹಾಸನ ಸಹ್ಯಾದ್ರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯಾಧಿಕಾರಿ ಡಾ|| ಭಾರತಿ ರಾಜಶೇಖರ್ ಅವರು ಹೇಳಿದರು.

ಪಟ್ಟಣದ ಕೆಂಪೇಗೌಡ ವೃತ್ತದ ಸಮೀಪದ ಡಾ|| ನಾರಾಯಣಸ್ವಾಮಿ ಕ್ಲಿನಿಕ್ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಮಹಿಳೆಯರ ಆರೋಗ್ಯ ತಪಾಸಣೆ, ಸ್ತನ ಕ್ಯಾನ್ಸರ್, ತಪಾಸಣೆ ಮತ್ತು ಹೆಚ್‌ಪಿವಿ ಲಸಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಅಭಿವೃದ್ಧಿ ಹೊಂದಲು ಆರೋಗ್ಯ ಕಾರಣ. ಮಹಿಳೆಯರು ಸ್ತನ ಕ್ಯಾನ್ಸರ್ ಪತ್ತೆ ಹಚ್ಚಲು ಮನೆಯಲ್ಲೇ ಪರೀಕ್ಷೆ ಮಾಡಿಕೊಳ್ಳಬಹುದು. ಸ್ನಾನದ ನಂತರ ಸ್ತನಗಳನ್ನು ಕೈಯಿಂದ ನೋಡಿಕೊಳ್ಳ ಬಹುದು. ಆಕಾರದಲ್ಲಿ ವ್ಯತ್ಯಾಸ ಕಂಡು ಬಂದರೆ ವೈದ್ಯರ ಸಲಹೆ ಪಡೆಯಬೇಕು. ಅಲ್ಲದೆ ಗರ್ಭ ಕೊರಳ ಕ್ಯಾನ್ಸರ್ ಬಗ್ಗೆ 9 ವರ್ಷದಿಂದ 45 ವರ್ಷದ ಒಳಗೆ ವರ್ಷಕ್ಕೊಮ್ಮೆ ವೈದ್ಯರಲ್ಲಿ ಪರೀಕ್ಷೆ ಕಡ್ಡಾಯ ವಾಗಿ ಮಾಡಿಸಿಕೊಳ್ಳುವುದು ಒಳ್ಳೆಯದು. ಜನ್ಮ ನೀಡುವ ತಾಯಿ ಆರೋಗ್ಯವಾಗಿದ್ದರೆ ಮುಂದಿನ ಪೀಳಿಗೆ ಗಳು ಆರೋಗ್ಯವಾಗಿರುತ್ತವೆ. ಈ ನಿಟ್ಟಿನಲ್ಲಿ ಮಹಿಳೆಯರು ಹೆಚ್‌ಪಿವಿ ವ್ಯಾಕ್ಸಿನ್ ಹಾಕಿಸಿಕೊಳ್ಳುವುದುದರಿಂದ ಕ್ಯಾನ್ಸರ್ ಬಾರದಂತೆ ತಡೆಯಬಹುದು, ಗರ್ಭ ಕೊರಳ ಕ್ಯಾನ್ಸರ್ ತಗುಲದಂತೆ ನೋಡಿಕೊಳ್ಳಬೇಕು.ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಜಂಕ್ ಫುಡ್, ಬೇಕರಿ ಪದಾರ್ಥಗಳಿಂದ ದೂರ ವಿರಬೇಕು. ಚಿಕ್ಕ ವಯಸ್ಸಿನಲ್ಲಿ ಮದುವೆ, ಧೂಮಪಾನ, ಮದ್ಯಪಾನದಿಂದ ದೂರವಿರಬೇಕೆಂದರು.

ಡಾ|| ನಾರಾಯಣಸ್ವಾಮಿ ಕ್ಲಿನಿಕ್‌ನ ವೈದ್ಯಾಧಿಕಾರಿ ಡಾ|| ನಾರಾಯಣ ಸ್ವಾಮಿ ಅವರು ಮಾತನಾಡಿ, ಪ್ರತಿ ತಿಂಗಳು ಮಹಿಳೆಯರು ಸ್ತನ ಕ್ಯಾನ್ಸರ್ ಪರೀಕ್ಷೆ ಮಾಡಿಕೊಳ್ಳಬೇಕು. ಆರಂಭದಲ್ಲಿ ವೈದ್ಯರ ಸಲಹೆ ಪಡೆಯಬೇಕೆಂದರು.

ಕಾಫಿ ಬೆಳೆಗಾರರ ಸಂಘದ ತಾಲ್ಲೂಕು ಅಧ್ಯಕ್ಷ ಅದ್ದೂರಿ ಚೇತನ್ ಕುಮಾರ್, ದಂತ ವೈದ್ಯ ಡಾ|| ಲೋಕೇಶ್ವರ್, ಶಿವಾನಿ ಮೆಡಿಕಲ್ ಮಾಲೀಕ ಸತೀಶ್ ಮತ್ತಿತರರಿದ್ದರು.

ಮಾಡಾಳು ಸ್ವರ್ಣ ಗೌರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ

• ಪ್ರಜೋದಯ ವರದಿ

ಮಾಡಾಳು: ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಸ್ವರ್ಣ ಗೌರಮ್ಮದೇವಿ ದೇವಾಲಯದಲ್ಲಿ ಮಾಘ ಮಾಸದ ಕೊನೆಯ ಅಮಾವಾಸ್ಯೆ ಪ್ರಯುಕ್ತ ನೂರಾರು ಭಕ್ತರ ಸಮ್ಮುಖದಲ್ಲಿ ಅಮ್ಮನವರಿಗೆ ವಿಶೇಷ ಪೂಜೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಪ್ರತಿ ತಿಂಗಳು ಅಮಾವಾಸ್ಯೆಯ ದಿನ ಕೋಡಿಮಠ ಜಗದ್ಗುರು ಡಾ. ಶಿವಾನಂದ ರಾಜೇಂದ್ರ, ಸ್ವಾಮೀಜಿ ಅವರ ಸಂಕಲ್ಪದಂತೆ ಲೋಕ ಕಲ್ಯಾ ಣಾರ್ಥ ಶಾಸ್ತ್ರೋಕ್ತವಾಗಿ ಪೂಜಾ ವಿಧಿ ವಿಧಾನ ನೆರವೇರಿತು.

ಪೂಜೆಯ ಅಂಗವಾಗಿ ದೇವಾಲ ಯವನ್ನು ಮಾವಿನ ತಳಿರು ತೋರಣ ಹಾಗು ಬಾಳೆ ಕಂದು, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿ ಸಲಾಗಿತ್ತು. ಪುರೋಹಿತರು ಕೋಡಿಮಠದ ಶ್ರೀ ಶಿವಲಿಂಗಜ್ಜಯ್ಯ ಮೂರ್ತಿಗೆ ಹಾಗು ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿ ಮತ್ತು ಅಮ್ಮ ನವರಿಗೆ ಕರ್ಪೂರ ದಾರತಿ ಹಾಗು ಮಹಾಮಂಗಳಾರತಿ ಸಲ್ಲಿಸಲಾಯಿತು. ಶಶಿವಾಳ ಗ್ರಾಮದ ರಾಮಕ, ಸಿದ್ದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ದಾಸೋಹ ವ್ಯವಸ್ಥೆ ಮಾಡಿದ್ದರು. ಮಾಡಾಳು ಕೊಪ್ಪಲು, ಸೀತಾಪುರ, ಯರೇಹಳ್ಳಿ, ಡಿ. ಎಂ.ಕುರ್ಕೆ, ಶಶಿವಾಳ, ರಾಂಪುರ, ಪಿ.ಹೊಸಳ್ಳಿ, ವೈ.ಜಿ.ಹಳ್ಳಿ, ಕಿತ್ತನಕೆರೆ, ದೋಣ ನಕಟ್ಟೆ, ಬೊಮ್ಮಸಮುದ್ರ, ಕೆ.ಶಂಕರನ ಹಳ್ಳಿ ಮುಂತಾದ ಗ್ರಾಮಗಳಿಂದ ದೇವರ ದರ್ಶನ ಪಡೆದರು.

ಕೃತಕ ಬುದ್ಧಿಮತ್ತೆಗಾಗಿ ಮಾನವ್ ವಿಷನ್ : ಐದು ಪ್ರಮುಖ ತತ್ವ ವಿವರಿಸಿದ ಮೋದಿ

• ಪ್ರಜೋದಯ ವರದಿ



ನವದೆಹಲಿ: ಕೃತಕಬುದ್ಧಿಮತ್ತೆಗಾಗಿ ಮಾನವ್ ವಿಷನ್ ಎಂಬ ಪರಿಕಲ್ಪನೆಯನ್ನು ಪ್ರಸ್ತಾಪಿಸಿ ರುವ ಪ್ರಧಾನಿ ನರೇಂದ್ರ ಮೋದಿ ಅವರು, ಅದಕ್ಕಾಗಿ ಐದು ಪ್ರಮುಖ ತತ್ವಗಳನ್ನು ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ವಿವರಿಸಿದ್ದಾರೆ.

ದೆಹಲಿಯ ಭಾರತ ಮಂಟಪದಲ್ಲಿ ಆಯೋ ಜನೆಗೊಂಡಿರುವ ಎಐ ಇಂಪ್ಯಾಕ್ಟ್ ಶೃಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದ ಅವರು, ಮಾನವ್ ಪದದ ಬಗ್ಗೆ ವಿವರಿಸಿರುವ ಅವರು, ಹಿಂದಿಯಲ್ಲಿ ಮಾನವ್ ಎಂದರೆ ಮನುಷ್ಯ ಎಂದರ್ಥ. ಈ ಪದ ಐದು ಪ್ರಮುಖ ಐದು ತತ್ವಗಳನ್ನು ಪ್ರತಿನಿಧಿಸುವ ಸಂಕ್ಷಿಪ್ತ ರೂಪವಾಗಿ ಕಾರ್ಯನಿರ್ವಹಿಸುತ್ತದೆ. ನೈತಿಕತೆ ಅಥವಾ ನೈತಿಕತೆಯ ವ್ಯವಸ್ಥೆ, ಜವಾಬ್ದಾರಿಯುತ ಆಡಳಿತ, ರಾಷ್ಟ್ರೀಯ ಸಾರ್ವಭೌಮತ್ವ, ವಿಶೇಷವಾಗಿ ದತ್ತಾಂಶದ ಹಕ್ಕು, ಸುಲಭವಾಗಿ ದೊರೆಯುವ ಮತ್ತು ಅಂತರ್ಗತ ತಂತ್ರಜ್ಞಾನ, ಮಾನ್ಯ ಮತ್ತು ಕಾನೂನುಬದ್ಧ ವ್ಯವಸ್ಥೆಗಳನ್ನು ಪ್ರತಿನಿಧಿಸುತ್ತದೆ ಎಂದಿದ್ದಾರೆ.

ವೈರ್‌ಲೆಸ್ ಸಂಹವನದ ಆವಿಷ್ಕಾರಕ್ಕೆ ಹೋಲಿಸಿದರೆ ಎಐ ಐತಿಹಾಸಿಕ ರೂಪಾಂತರವಾಗಿದೆ. ಮೊದಲ ಬಾರಿಗೆ ವೈರ್‌ಲೆಸ್ ಮೂಲಕ ಒಂದು ಕಡೆ ಯಿಂದ ಕಳುಹಿಸಿದ ವಿಷಯ ಕ್ಷಣಮಾತ್ರದಲ್ಲಿ ಮತ್ತೊಂದು ಪ್ರದೇಶಕ್ಕೆ ತಲುಪಲು ಸಾಧ್ಯ ಎಂಬುದನ್ನು ಊಹಿಸಿರಲಿಲ್ಲ. ಈಗ ನಾವು ಊಹಿಸುತ್ತಿ ರುವುದು ಎಐ ಪ್ರಭಾವದ ಆರಂಭ ಮಾತ್ರ ಎಂದು ವಿವರಿಸಿದರು.

ಕೃತಕ ಬುದ್ಧಿಮತ್ತೆಯು ಯಂತ್ರಗಳಿಗೆ ಬುದ್ಧಿಯ ಬಲ ತುಂಬುತ್ತಿದೆ. ಆದರೆ ಅದಕ್ಕಿಂತ ಹೆಚ್ಚಾಗಿ, ಅದು ಮಾನವನ ಸಾಮರ್ಥ್ಯಗಳನ್ನು ಹಲವು ಪಟ್ಟು ಹೆಚ್ಚಿಸುತ್ತಿದೆ. ಅದರಲ್ಲಿ ಒಂದೇ ಒಂದು ವ್ಯತ್ಯಾಸವೆಂದರೆ ಎಐನ ವೇಗ ಈ ಬಾರಿ ಹೆಚ್ಚಾಗಿದೆ. ಒಂದು ಕಾಲದಲ್ಲಿ ಯಂತ್ರಗಳಿಂದ ಕಲಿಕೆ ಎನ್ನುವುದು ಸಾಮಾನ್ಯವಾಗಿತ್ತು. ಯಂತ್ರಗಳಿಗೆ ಕಲಿಕೆ ಮಾಡಿಸುವ ಕಾಲ ಇದಾಗಿದೆ. ಎಐ ಎಂದಿಗಿಂತಲೂ ವೇಗವಾಗಿ, ಆಳವಾಗಿ ಬದಲಾಗುತ್ತಿದೆ ಎಂದರು.

ಫೆ.22 ರಂದು ಗೊರೂರು ನಾಟಕ ಪ್ರದರ್ಶನ

• ಪ್ರಜೋದಯ ವರದಿ

ಹಾಸನ: ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಊರಿನ ರಸಿಕರು ಮತ್ತು ಇತರೆ ಕೃತಿಗಳ ಆಧಾರಿತ ಗೊರೂರು ನಾಟಕ ಪ್ರದರ್ಶನ ಫೆ.22 ರಂದು ನಗರದ ಕಲಾಕ್ಷೇತ್ರದಲ್ಲಿ ಮೈಸೂರಿನ ನಿರಂತರ ರಂಗ ತಂಡ ಪ್ರಸ್ತುತ ಪಡಿಸಲಿದೆ ಎಂದು ತಂಡದ ಸೋಮಶೇಖರ್ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಆಯ್ದ ಬರಹಗಳನ್ನಾಧರಿಸಿ ಹೊಸ ನಾಟಕವನ್ನು ರಂಗಕ್ಕೆ ಇದೇ ಮೊದಲ ಬಾರಿಗೆ ಅಳವಡಿಸಲಾಗಿದೆ. ಗೊರೂರಿನ ಜೀವಂತ ಪಾತ್ರಗಳು ನಾಟಕದಲ್ಲಿ ಬರಲಿವೆ. ಈ ನಾಟಕ ಈವರೆಗೂ 25 ಪ್ರದರ್ಶನ ಕಂಡಿದೆ. ಈ ನಾಟಕ ಗೊರೂರು ಅವರ ತವರು ಹಾಸನದಲ್ಲಿ ಪ್ರದರ್ಶಿಸಬೇಕೆಂಬುದು ನಮ್ಮ ಆಸೆಯಾಗಿತ್ತು. ಇದೀಗ ಅದು ಈಡೇರುತ್ತಿದೆ ಎಂದರು.

ನಾಟಕದ ಅವಧಿ 1 ಗಂಟೆ 40 ನಿಮಿಷ ಇದ್ದು, ಜನಪದ ಹಾಡುಗಳು ಮೆರುಗು ನೀಡಲಿವೆ. ತಮ್ಮ ದೈನಂದಿನ ಜೀವನದಲ್ಲಿ ವಿಚಿತ್ರವಾದ ಸನ್ನಿವೇಶಗಳನ್ನು ಗೊರೂರಿನ ನಿವಾಸಿ ಗಳು ಎದುರಿಸುತ್ತಿದ್ದರೂ, ಸಾಮರಸ್ಯ ದಿಂದ ಸಹಬಾಳ್ವೆ ನಡೆಸುತ್ತಲೇ ಒಟ್ಟಾಗಿ ತಮ್ಮ ಸವಾಲುಗಳನ್ನು ಪರಿ ಹರಿಸುತ್ತಾರೆ. ಮಂಜುನಾಥ್ ಎಲ್ ಬಡಿಗೇರ ನಿರ್ದೇಶನ ಮಾಡಿದ್ದು, ಬೆಳಕು ಜೀವನ್ ಬಿ.ಹೆಗ್ಗೋಡು, ದಿಗ್ವಿಜಯ ಹೆಗ್ಗೋಡು ಸಂಗೀತ ನೀಡಿ ದ್ದಾರೆ. ಹಿರಿಯ ರಂಗಕರ್ಮಿ ಗೊರೂರು ನಾಟಕ ಹಾಸನದಲ್ಲಿ ಅಭಿ ನಯವಾಗಬೇಕೆಂಬ ಆಸೆ ತಡವಾಗಿ ಆದರೂ ಈಡೇರುತ್ತಿದೆ. ಇಂದು ರಂಗಕಲೆ ಕಡಿಮೆ ಆಗುತ್ತಿದೆ. ಯುವ ಜನತೆ ಬೇರೆಡೆ ಹೋಗುತ್ತಿದೆ ಎಂದು ಹೇಳಿದರು. ಹಾಸನದ ರಂಗ ಸಂಘಟಕ ಪ್ರಸನ್ನ ಕುಮಾರ್, ಸಾಹಿತಿ ಚಿನ್ನೇನಹಳ್ಳಿ ಸ್ವಾಮಿ ಇದ್ದರು.

ಫೆ.28 ರಂದು ರಕ್ಷಿದಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ

• ಪ್ರಜೋದಯ ವರದಿ

ಹಾಸನ: ಜಾನಪದ ತಜ್ಞ ಎ.ಕೆ. ಕರೀಖಾನ್ ಸೌದಾರ್ಹ ಪ್ರಶಸ್ತಿ ಹಾಗು ಅಮೃತಾ ರಕ್ಷಿದಿ ಸ್ಮಾರಕ ಪ್ರಶಸ್ತಿಗಳ ಪ್ರದಾನ ಸಮಾರಂಭ ಫೆ.28 ರಂದು ಸಕಲೇಶಪುರ ತಾಲ್ಲೂಕಿನ ರಕ್ಷಿದಿ ಗ್ರಾಮದ ಪೂರ್ಣಚಂದ್ರ ತೇಜಸ್ವಿ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ ಎಂದು ಹಿರಿಯ ರಂಗಕರ್ಮಿ ಪ್ರಸಾದ್ ರಕ್ಷಿದಿ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶಸ್ತಿ ಪ್ರದಾನ ಸಮಾರಂಭ ಅಂದು ಸಂಜೆ 6 ಗಂಟೆಗೆ ನಡೆಯಲಿದೆ. ಡಾ.ಪುರುಷೋತ್ತಮ ಬಿಳಿಮಲೆ, ಡಾ.ದೇವರಾಜು, ಕೆ.ಜಿ. ಮಹಾಬಲೇಶ್ವರ್ ಮೊದಲಾದವರು ಭಾಗಿಯಾಗಲಿದ್ದಾರೆ. ನಂತರ ಸಾಂಸ್ಕೃ ತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಎಸ್.ಕೆ.ಕರೀಂಖಾನ್ ಸೌದಾರ್ಹ ಪ್ರಶಸ್ತಿಗೆ ನಟ, ನಿರ್ದೇಶಕನಾಗಿ, ಸಂಘ ಟಕರಾಗಿ, ಯಕ್ಷಗಾನ, ಆಧುನಿಕ ರಂಗ ಭೂಮಿಯಲ್ಲಿ ಕೆಲಸ ಮಾಡುತ್ತಿರುವ ಕೋಲಾರ ಜಿಲ್ಲೆಯ ಅಚ್ಯುತ ಕೆ.ಜಿ.ಎಫ್. ಅವರು ಪಾತ್ರರಾಗಿದ್ದಾರೆ. ಅಮೃತಾ ರಕ್ಷಿದಿ ಸ್ಮಾರಕ ಪ್ರಶಸ್ತಿಗೆ ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಕೆರವಡಿ ಗ್ರಾಮದ ವೀರಪ್ಪ-ಮಂಜುಳಾ ದಂಪತಿ ಪುತ್ರಿ, ಶ್ರವಣ ದೋಷ ಇದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ, ಹಲವು ಕವನ ಸಂಕಲನ ರಚನೆ ಮಾಡಿರುವ, ಕವಿ-ಕಾವ್ಯ ಸ್ಪರ್ಧೆಯಲ್ಲಿ ಹತ್ತು-ಹಲವು ಬಹುಮಾನ ಪಡೆದಿರುವ ಮಧು ಕಾರಗಿ ಹಾಗು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರ ತಾಲ್ಲೂಕಿನ ಚಿಕ್ಕನ ಹಳ್ಳಿಯ ಚನ್ನಕೃಷ್ಣಪ್ಪ-ಹನುಮಕ್ಕ ಪುತ್ರ ವಿನಯ್‌ಗುಂಟೆ ಭಾಜನರಾಗಿ ದ್ದಾರೆ ಎಂದರು.

ಈ ಮೂವರು ಸಾಧಕರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಸಾಹಿತಿ, ಸಾಮಾಜಿಕ ಕಾರ್ಯಕರ್ತರಾದ ಡಾ. ಹೆಚ್. ಎಸ್. ಅನುಪಮಾ ಅವರನ್ನೊಳಗೊಂಡ ಸಮಿತಿ ಆಯ್ಕೆ ಮಾಡಿದೆ. ಕರೀಖಾನ್ ಹೆಸರಿನ ಪ್ರಶಸ್ತಿ 10 ಸಾವಿರ ನಗದು ಹಾಗು ಪ್ರಶಸ್ತಿ ಫಲಕ, ಸ್ಮರಣಿಕೆ ಒಳಗೊಂಡಿದ್ದರೆ, ಅಮೃತಾ ರಕ್ಷಿದಿ ಪ್ರಶಸ್ತಿ ಪುರಸ್ಕೃತರಿಗೆ ತಲಾ 5 ಸಾವಿರ ಜೊತೆಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು ಎಂದರು.

ಸಾಹಿತಿ ಸುಬ್ಬು ಹೊಲೆಯಾರ್ ಮಾತನಾಡಿ, ನನ್ನ ತಾಯಿ ತಿಪ್ಪಮ್ಮ ಕೊಮಾರಯ್ಯ ಅವರ ನೆನಪಿನಲ್ಲಿ ಎಸ್. ಕೆ.ಕರೀಖಾನ್ ಅವರ ಹೆಸರಿನಲ್ಲಿ ಕಳೆದ ವರ್ಷದಿಂದ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಸಾದ್ ರಕ್ಷಿದಿ ಅವರು ಗಾಂಧಿ-ಅಂಬೇಡ್ಕರ್ ಅವರಿಂದ ಪ್ರಭಾವಿತರಾಗಿ ಸಾಂಸ್ಕೃತಿಕವಾಗಿ ಸದಾ ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ನಾಟಕ, ಮಕ್ಕಳ ಚಟುವಟಿಕೆ ಮೂಲಕ ರಂಗ ಚಟುವಟಿಕೆ ಉತ್ತೇಜಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಜೊತೆಗೆ ಜಾನಪದದ ಸಾಕ್ಷಿ ಪ್ರಜ್ಞೆಯಾಗಿರುವ ಕರೀಂಖಾನ್ ಅವರ ಹೆಸರು ಉಳಿಸಲು ಈ ಪ್ರಶಸ್ತಿ ನೀಡಲಾ ಗುತ್ತಿದೆ. ಎಲ್ಲರೂ ಆಗಮಿಸಿ ಯಶಸ್ವಿ ಗೊಳಿಸುವಂತೆ ಮನವಿ ಮಾಡಿದರು.

ಸರ್ಕಾರಿ ಶಾಲೆ ಉಳಿವಿಗಾಗಿ ದೇವರಾಜಪುರದಲ್ಲಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಆಲೂರು ತಾಲ್ಲೂಕಿನ ದೇವರಾಜಪುರ ಕಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ ಮುಚ್ಚಲಾಗುತ್ತಿ ದೆಂದು ಆರೋಪಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಅವರು ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸ ರಲ್ಲಿ ದೇವರಾಜಪುರ ಕಿರಿಯ ಪ್ರಾಥ ಮಿಕ ಶಾಲೆ ಮುಚ್ಚಿ ಇಲ್ಲಿನ ವಿದ್ಯಾರ್ಥಿ ಗಳನ್ನು ಕಾಮತಿ ಕೂಡಿಗೆಗೆ ಕಳುಹಿಸಲಾ ಗುತ್ತದೆ. ಈ ರೀತಿ ಜಿಲ್ಲೆಯಲ್ಲಿ 1942 ಶಾಲೆಗಳನ್ನು ಮುಚ್ಚಲು ಪಟ್ಟಿ ತಯಾರಿಸಲಾ ಗಿದೆ. ರಾಜ್ಯವ್ಯಾಪಿ 40 ಸಾವಿರಕ್ಕೂ ಅಧಿಕ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಸಾವಿತ್ರಿಬಾಯಿ-ಜ್ಯೋತಿಬಾ ಫುಲೆಯವರ ಹೋರಾಟ ಮತ್ತು ಪರಿಶ್ರಮದ ಫಲವಾಗಿ ಇಂದು ಹಳ್ಳಿಗಳಿಗೆ ಸರ್ಕಾರಿ ಶಾಲೆಗಳು ಆರಂಭವಾಗಿವೆ. ಮಹಾತ್ಮರ ಆಶಯಗ ಳನ್ನು ಗಾಳಿಗೆ ತೂರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ ಯೆಂದು ಆಕ್ರೋಶ ವ್ಯಕ್ತಪಡಿಸಿದರು.

ಅ.15ರಂದು ಹೊರಡಿಸಿರುವ ಆದೇ ಶದಲ್ಲಿ ಆಯ್ದ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ 5 ಕಿ.ಮೀ. ವ್ಯಾಪ್ತಿಯ ಶಾಲೆ ಗಳನ್ನು ಜೋಡಿಸುವುದಾಗಿ ಸ್ಪಷ್ಟ ಪಡಿ ಸಿದೆ. ಆದರೆ, ಶಿಕ್ಷಣ ಸಚಿವರು ಒಂದೇ ಒಂದು ಶಾಲೆ ಮುಚ್ಚುವುದಿಲ್ಲ ಎಂದು ಸುಳ್ಳು ಹೇಳುತ್ತ ಇನ್ನೊಂದೆಡೆ ಹಳ್ಳಿಗಳಿಗೆ ಬಸ್ ಬಿಡುವುದಾಗಿ ಹೇಳುತ್ತಿ ದ್ದಾರೆ. ಈ ಬಸ್ ಒದಗಿಸುವ ಜವಾಬ್ದಾರಿಯನ್ನು ಎಸ್‌ಡಿಎಂಸಿಗೆ ವಹಿಸಲಾಗಿದೆ. ಸರ್ಕಾರ ಶಿಕ್ಷಣದ ಜವಾಬ್ದಾರಿಯಿಂದ ನುಣುಚಿ ಕೊಂಡು ಇಡೀ ಸಾರ್ವಜನಿಕ ಶಿಕ್ಷಣ ವನ್ನು ಕಾರ್ಪೊರೇಟ್ ಕಂಪನಿಗಳಿಗೆ ದಾನ ಮಾಡುವ ಹುನ್ನಾರ ರಚಿಸಿದೆ. ಅದರ ವಿರುದ್ಧ ಒಗ್ಗಟ್ಟಾಗಿ ಹೋರಾಡು ವುದೇ ಜನರ ಮುಂದಿರುವ ಪರಿಹಾರ ವಾಗಿದೆಯೆಂದರು.

ಗ್ರಾಮದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಅಧ್ಯಕ್ಷ ಮಲ್ಲೇಶ್ ಅವರು ಮಾತನಾಡಿ, 6ನೇ ತರಗತಿ ಯಿಂದಲೇ ಕೆಪಿಎಸ್ ಶಾಲೆಯಲ್ಲಿ ಅಡಿಕೆ ಸುಲಿಯುವುದು ಸೇರಿ ಇತರ ಕಸುಬು ಗಳನ್ನು ಕಲಿಸು ವುದಾಗಿ ಸರ್ಕಾರ ಹೇಳಿದೆ. ಸಮಾಜದ ತಳ ಸಮುದಾ ಯದ ಮಕ್ಕಳ ವಿದ್ಯೆ ಕಸಿದು ಕೂಲಿಗೆ ಕಳಿಸುವ ಸರ್ಕಾರದ ಹುನ್ನಾರವನ್ನು ನಾವು ಒಪ್ಪುವುದಿಲ್ಲ. ಈ ಯೋಜನೆ ರದ್ದಾಗು ವವರೆಗೂ ನಿರಂತರವಾಗಿ ಹೋರಾಟ ನಡೆಸುತ್ತೇವೆಂದರು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರಾ, ಉಪಾಧ್ಯಕ್ಷ ಅಭಿಷೇಕ್, ಚಂದ್ರಶೇಖರ್, ಪ್ರಮೀಳಾ, ರೂಪ, ಗಾಯತ್ರಿ, ಗೌರಮ್ಮ, ಹರೀಶ್, ಚಂದನ, ಲಲಿತಾ ಮತ್ತಿತರರಿದ್ದರು.

ಟ್ರ್ಯಾಕ್ಟರ್ ಬಂಪರ್‌ಗೆ ಸಿಲುಕಿ ಮಹಿಳೆ ಸಾವು

ಹಾಸನ: ಟ್ರ್ಯಾಕ್ಟರ್ ಚಾಲಕನ ನಿರ್ಲಕ್ಷ್ಯದಿಂದ ಮುಂದಿನ ಬಂಪರ್ ಗೆ ಸಿಲುಕಿ ಕೂಲಿ ಕಾರ್ಮಿಕ ಮಹಿಳೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಪಿರುಮೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ರಾಯಚೂರು ಜಿಲ್ಲೆ ಉಪ್ಪಲ್ ಗ್ರಾಮದ ಲಕ್ಕಮ್ಮ (33) ಮೃತರು. ತಾಲ್ಲೂಕಿನ ಚಿಕ್ಕಬಾಗನ ಹಳ್ಳಿ ಗ್ರಾಮ ದಲ್ಲಿ ಸಂಸಾರ ಸಮೇತ ವಾಸವಿದ್ದ ಅವರು ಕೂಲಿ ಕೆಲಸ ಮಾಡಿಕೊಂಡಿ ದ್ದರು. ಫೆ. 5ರಂದು ಮಂಜುನಾಥ ಎಂಬುವವರ ಟ್ರ್ಯಾಕ್ಟರ್‌ನಲ್ಲಿ ಪಿರು ಮೇನಹಳ್ಳಿ ಗ್ರಾಮಕ್ಕೆ ಹುಲ್ಲು ಒಕ್ಕಣೆ ಕೆಲಸಕ್ಕೆ ಹೋಗಿದ್ದರು. ರಾಗಿ ಹುಲ್ಲು ಹರಡಿದ ಕಣದ ಬದಿಯಲ್ಲಿ ಕುಳಿತಿ ದ್ದಾಗ ಚಾಲಕ ವೇಗವಾಗಿ ವಾಹನ ಓಡಿಸಿದ್ದರಿಂದ ಲಕ್ಕಮ್ಮ ಅವರಿಗೆ ಡಿಕ್ಕಿ ಯಾಗಿ ಮುಂದಿನ ಬಂಪರ್‌ಗೆ ಸೀರೆ ಸೆರಗು ಸಿಲುಕಿ ಕುತ್ತಿಗೆ, ಹಿಂಭಾಗದ ತಲೆಗೆ, ಹೊಟ್ಟೆಗೆ ಹಾಗು ಕೈಕಾಲುಗಳಿಗೆ ಗಂಭೀರ ಗಾಯ ಗಳಾಗಿದ್ದವು. ಅವ ರನ್ನು ಹಾಸನದ ಹಿಮ್ಸ್‌ಗೆ ದಾಖಲಿಸಿ ನಂತರ ಕರ್ನೂಲ್ ಆಸ್ಪತ್ರೆಗೆ ದಾಖಲಿ ಸಲಾಗಿತ್ತು. ಚಿಕಿತ್ಸೆ ಫಲಿಸದೆ ಬುಧ ವಾರ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.21 ರಂದು 28ನೇ ಕೊಂಡೋತ್ಸವ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಶ್ರೀಕ್ಷೇತ್ರ ಪುಣ್ಯ ಧಾಮದಲ್ಲಿ ಫೆ.21 ಶನಿವಾರ ಶ್ರೀ ಶನೇಶ್ವರ ಹಾಗೂ ಶ್ರೀ ಜಡೆ ಮುನೇ ಶ್ವರ ಸ್ವಾಮಿಯ 28ನೇ ವರ್ಷದ ಕೆಂಡಕೊಂಡ ಜಾತ್ರಾ ಮಹೋತ್ಸವ ಏರ್ಪಡಿಸಲಾಗಿದೆ ಎಂದು ಧರ್ಮಾಧಿ ಕಾರಿಗಳಾದ ಶ್ರೀ ಶ್ರೀಧರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕೆ.ಹೊಸೂರು ಗೇಟ್ ಬಳಿಯಿರುವ ಶ್ರೀಕ್ಷೇತ್ರ ಪುಣ್ಯಧಾಮ ದಲ್ಲಿ ಶ್ರೀಗಳು ಮಾತನಾಡಿ, ಫೆ.21ರ ಶನಿವಾರ ಮುಂಜಾನೆ ದೇವಾಲಯಕ್ಕೆ ಹೂವಿನ ಚಪ್ಪರ ಕಾರ್ಯ ಜರುಗ ಲಿದ್ದು ಮೊದಲಿಗೆ ಶ್ರೀ ವಿಘ್ನೇಶ್ವರ ಹಾಗೂ ಗಂಗಾಪೂಜೆ ಬಳಿಕ ಶ್ರೀ ಶನೇಶ್ವರಸ್ವಾಮಿ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಅಭಿಷೇಕ ನಡೆಯಲಿದೆ ಎಂದರು.

ಬೆಳಿಗ್ಗೆ9.15ಕ್ಕೆಅಗ್ನಿಕೊಂಡ ಹಚ್ಚುವ ಪೂಜಾ ಕಾರ್ಯಕ್ರಮ, ಮಧ್ಯಾಹ್ನ 1 ಗಂಟೆಗೆ ಸುಗಮ ಸಂಗೀತ ಕಾರ್ಯ ಕ್ರಮ, ಮಧ್ಯಾಹ್ನ 2 ಗಂಟೆಗೆ ಕಳಸ ಪ್ರತಿಷ್ಠಾಪನೆ, ಮಂಗಳವಾದ್ಯದೊಂ ದಿಗೆ ಉತ್ಸವ ಸಮೇತ ಶ್ರೀ ಸ್ವಾಮಿ ಯವರನ್ನು ನಡೆಮುಡಿ ಮೆರವಣಿಗೆ ಯಲ್ಲಿ ಕರೆತರಲಾಗುವುದೆಂದು ತಿಳಿಸಿದರು.

ಸಂಜೆ 5 ಗಂಟೆಗೆ ಬಾಳೆ ಕಂಬದ ಪೂಜೆ, ಅಗ್ನಿಕೊಂಡ ಪೂಜೆ ನಂತರ ಅಗ್ನಿಕೊಂಡ ಹಾಯುವ ಸೇವೆ ಕಾರ್ಯ ಜರುಗಲಿದ್ದು ಸಂಜೆ 7.30ಕ್ಕೆ ಧಾರ್ಮಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಶಾಸಕ ಸಿ.ಎನ್. ಬಾಲಕೃಷ್ಣ, ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಕಾಂಗ್ರೆಸ್‌ಮುಖಂಡ ಅಣತಿ ಆನಂದ್, ಜೆಡಿಎಸ್ ಮುಖಂಡ ಸಿ.ಎನ್.ಶಶಿಧರ್ ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ರಾತ್ರಿ 9.30ಕ್ಕೆ ಹಾಸನದ ಶ್ರೀ ವಿನಾಯಕ ಡ್ರಾಮ ಸೀನರಿಯೊಂದಿಗೆ ಭವ್ಯ ರಂಗಸಜ್ಜಿಗೆಯಲ್ಲಿ ಬೆಂಗಳೂರಿನ ಶ್ರೀ ಹದ್ದಿನಕಲ್ಲು ಮಾರುತಿ ಕಲಾ ಬಳಗದ ವತಿಯಿಂದ ಕುರುಕ್ಷೇತ್ರ ಅಥವಾ ಶ್ರೀಕೃಷ್ಣ ಸಂಧಾನ ಎಂಬ ಪೌರಾಣಿಕ ನಾಟಕದ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಉತ್ಸವದಲ್ಲಿ ಬೆಳಗಿಹಳ್ಳಿ ಹಾಗೂ ಹಿರೀಸಾವೆಯ ದಿ.ಕೃಷ್ಣಪ್ಪ ಮತ್ತು ತಂಡದವರಿಂದ ನಾದಸ್ವರ ವಾದ್ಯ, ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ ಹಾಗೂ ಮಂಡ್ಯ ಗಂಗಣ್ಣ ನವರ ತಂಡದಿಂದ ಕಂಸಾಳೆ ನೃತ್ಯ ಮೇಳೈಸಲಿದೆ ಎಂದು ತಿಳಿಸಿದರು.

ಪ್ರತಿವರ್ಷಕ್ಕಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಲಿದ್ದು ದೇವರ ದರ್ಶನ, ವಾಹನ ನಿಲುಗಡೆ, ಕುಡಿಯುವ ನೀರು ಹಾಗೂ ಅನ್ನ ದಾಸೋಹ ಸೇರಿ ಸಕಲ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ರೂಪಿಸಲಾಗಿದೆ. ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರ ರಾಗಬೇಕೆಂದು ಕರೆ ನೀಡಿದರು.

ತಮಿಳುನಾಡಿನಲ್ಲಿ ಡಿಎಂಡಿಕೆ-ಡಿಎಂಕೆ ಮೈತ್ರಿ

• ಪ್ರಜೋದಯ ವರದಿ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವ ಣೆಗೂ ಮುನ್ನ ದಿ|| ನಟ ವಿಜಯಕಾಂತ್ ಅವರ ಡಿಎಂಡಿಕೆ ಪಕ್ಷವು ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟಕ್ಕೆ (ಎಸ್‌ಪಿಎ) ಸೇರ್ಪ ಡೆಗೊಂಡಿದೆ.

ಡಿಎಂಕೆ ಅಧ್ಯಕ್ಷ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಸಮುಖದಲ್ಲಿ ಡಿಎಂಡಿಕೆ ಕಾರ್ಯ ದರ್ಶಿ ಪ್ರೇಮಲತಾ ವಿಜಯಕಾಂತ್ ಅವರು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಇದೇ ವೇಳೆ ಡಿಎಂಡಿಕೆ ಪಕ್ಷದ ನಾಯಕ ಎಲ್.ಕೆ.ಸುಧೀಶ್ ಸೇರಿ ಪಕ್ಷದ ಮು ಖಂಡರು ಉಪಸ್ಥಿತರಿದ್ದರು.

ನನ್ನ ಆತ್ಮೀಯ ಗೆಳೆಯ ಕ್ಯಾಪ್ಟನ್ ವಿಜಯಕಾಂತ್ ಸ್ಥಾಪಿಸಿದ್ದ ಮತ್ತು ಡಿಎಂಕೆ ಪಿತಾಮಹ ಎಂ. ಕರುಣಾನಿಧಿ ಅವರ ಮೇಲೆ ಅಚಲ ಪ್ರೀತಿ ಹೊಂದಿದ್ದ ಡಿಎಂಡಿಕೆ ಪಕ್ಷವು ಇಂದು ಜಾತ್ಯತೀತ ಪ್ರಗತಿಪರ ಒಕ್ಕೂಟಕ್ಕೆ ಸೇರ್ಪಡೆಗೊಂಡಿರುವುದು ತುಂಬಾ ಸಂತೋಷ ತಂದಿದೆ. ವಿಜಯಕಾಂತ್ ರಚಿಸಿದ ಪಕ್ಷವನ್ನು ಪ್ರೀತಿಯ ಸಹೋದರಿ ಪ್ರೇಮಲತಾ ವಿಜಯಕಾಂತ್ ಸಮರ್ಥವಾಗಿ ಮುನ್ನಡೆಸುತ್ತಿದ್ದಾ ರೆಂದು ಸ್ಟಾಲಿನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಪ್ಪು ಮತ್ತು ಕೆಂಪು ಧ್ವಜವನ್ನು ಹೊತ್ತ ನಿಮ್ಮ ಸ್ವಾಗತ ಮತ್ತು ಸದ್ಭಾವನೆಯು ತಮಿಳುನಾಡಿನ ಉದಯಕ್ಕೆ ಕೊಡುಗೆ ನೀಡುವುದನ್ನು ಮುಂದು ವರಿಸಲಿ. ದ್ರಾವಿಡ ಮಾದರಿ ಆಳ್ವಿಕೆಯನ್ನು ಮುಂದುವರಿಸಲು ಮತ್ತು ತಮಿಳುನಾಡನ್ನು ಎಲ್ಲಾ ರೀತಿಯಲ್ಲಿ ಪ್ರಗತಿಯ ಪಥದಲ್ಲಿ ಮುನ್ನಡೆ ಸಲು ಒಟ್ಟಾಗಿ ಸಾಗೋಣವೆಂದು ಸ್ಟಾಲಿನ್ ಅವರು ತಿಳಿಸಿದ್ದಾರೆ.

ಕ್ಯಾಪ್ಟನ್ (ವಿಜಯಕಾಂತ್) ಮತ್ತು ಕಲೈಗ್ನರ್ ಆಶೀರ್ವಾದದೊಂದಿಗೆ ನಾವು ಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ. ಶೀಘ್ರದಲ್ಲೇ ಸೀಟು ಹಂಚಿಕೆ ಸಮಿತಿಯನ್ನು ರಚಿಸಲಾಗುವುದೆಂದು ಪ್ರೇಮಲತಾ ಅವರು ತಿಳಿಸಿದ್ದಾರೆ. 2021ರ ವಿಧಾನಸಭಾ ಚುನಾ ವಣೆಯಲ್ಲಿ ಡಿಎಂಡಿಕೆ ಪಕ್ಷವು ಟಿಟಿವಿ ದಿನಕರನ್ ಅವರ ಅಮ್ಮ ಮಕ್ಕಳ್ ಮುನ್ನೇತ್ರ ಕಳಗಂ ಜೊತೆ ಪಾಲುದಾರಿಕೆ ಹೊಂದಿತ್ತು. 2024ರ ಲೋಕಸಭಾ ಚುನಾವಣೆಯಲ್ಲಿ ಡಿಎಂಡಿಕೆ ಪಕ್ಷವು ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟದ ಭಾಗವಾಗಿತ್ತು.

ಊಹಾಪೋಹಗಳಿಗೆ ತೆರೆ

ದೇಶೀಯ ಮುರ್ಪೋಕ್ಕು ದ್ರಾವಿಡ ಕಳಗಂ(ಡಿಎಂಡಿಕೆ) ಗುರುವಾರ ಅಧಿಕೃತವಾಗಿ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟ(ಎಸ್‌ಪಿಎ)ದೊಂದಿಗೆ ಸೇರ್ಪಡೆಯಾಗುವ ಮೂಲಕ ರಾಜಕೀಯ ಊಹಾಪೋಹಗಳಿಗೆ ಅಂತ್ಯ ಹಾಡಿದೆ. 2005 ರಲ್ಲಿ ನಟ-ರಾಜಕಾರಣಿ ವಿಜಯಕಾಂತ್ ಸ್ಥಾಪಿಸಿದ ಡಿಎಂಡಿಕೆ, ಈ ಹಿಂದೆ ಯಾವತ್ತೂ ಡಿಎಂಕೆ ಜೊತೆ ಮೈತ್ರಿ ಅಥವಾ ಹೊಂದಾಣಿಕೆ ಮಾಡಿಕೊಂಡಿಲ್ಲ. ಡಿಎಂಡಿಕೆ, ಡಿಎಂಕೆ ಜೊತೆ ಕೈಜೋಡಿಸಿರುವುದು ಇದೇ ಮೊದಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019